ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallmmanudi@gmail.com E-paper: www.mallmmanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy

VOLUME - 13 ಸಂಪುಟ-13 | ISSUE - 32 ಸಂಚಿಕೆ- 32 | PAGE-8 ಪುಟ-8 | ಶನಿವಾರ 08.03.2025 | RS.2/- ಬೆಲೆ 2/-

# 4 ಲಕ್ಷ ಕೋಟಿ ರೂ ಬಜೆಟ್ ಮಂಡಿಸಿದ ಸಿಎಂ



ಮಲ್ಲಮ್ಮ ನುಡಿ ವಾರ್ತೆ
ಬೆಂಗಳೂರು:ಮಾ.7:ಹಣಕಾಸು ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ 2025-26ನೇ ಸಾಲಿನ ಬಜೆಟ್ ಮಂಡಿಸಿದ್ದು, ಗ್ಯಾರಂಟಿ ಯೋಜನೆಗಳಿಗೆ ಬರೋಬ್ಬರಿ 51 ಸಾವಿರ ಕೋಟಿ ರೂ. ನೀಡುವುದರ ಜೊತೆಗೆ ಹತ್ತು ಹಲವು ಹೊಸ ಘೋಷಣೆಗಳನ್ನೂ ಮಾಡಿದ್ದಾರೆ.

ಇಂದು ವಿಧಾನಸಭೆಯಲ್ಲಿ 4,09,549 ಕೋಟಿ ರೂ. ಗಾತ್ರದ ಬಜೆಟ್ ಮಂಡಿಸಿದ ಸಿಎಂ ಸಿದ್ದರಾಮಯ್ಯ ಅವರು ಇದರಲ್ಲಿ 19,262 ಕೋಟಿ ರೂ. ರಾಜಸ್ವ ಕೊರತೆಯನ್ನು ಉಲ್ಲೇಖಿಸಿದ್ದಾರೆ.

1994 ರಲ್ಲಿ ಜನತಾ ದಳದ ಆಡಳಿತದಲ್ಲಿ ಡಿಸಿಎಂ ಆಗಿ ಮೊದಲ ಬಾರಿ ಬಜೆಟ್ ಮಂಡಿಸಿದ್ದ ಸಿದ್ದರಾಮಯ್ಯ ಅವರು ಇಂದು ತಮ್ಮ 16ನೇ ಬಜೆಟ್ ಅನ್ನು ಮಂಡಿಸುವ ಮೂಲಕ ಒಂದು ರೀತಿಯ ಇತಿಹಾಸವನ್ನು ಸೃಷ್ಟಿಸಿದರು. ಎರಡನೇ ಅವಧಿಗೆ ರಾಜ್ಯದ ಮುಖ್ಯಮಂತ್ರಿಯಾಗಿ ಇದು ಅವರ ಮೂರನೇ ಬಜೆಟ್ ಮತ್ತು ಸತತ ಎರಡನೇ ಆದಾಯ ಕೊರತೆ ಬಜೆಟ್ ಆಗಿದೆ.

ಈ ಬಾರಿಯೂ ಪಂಚ ಗ್ಯಾರಂಟಿಗೆ 51,034 ಕೋಟಿ ರೂ. ಅನುದಾನ ನೀಡಲಾಗಿದೆ. ಹೀಗಾಗಿ ಇನ್ನೂ ಹೆಚ್ಚಿನ ಸಾಲದೊಂದಿಗೆ 4,09,549 ಕೋಟಿ ರೂ. ಮೊತ್ತದ ಆಯವ್ಯಯ ಮಂಡಿಸಿದ್ದಾರೆ.

"ಕರ್ನಾಟಕವು ಭಾರತದಲ್ಲಿ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ರಾಜ್ಯಗಳಲ್ಲಿ ಒಂದಾಗಿದೆ, ಇದು ರಾಷ್ಟ್ರೀಯ ಒಟ್ಟು ದೇಶೀಯ ಉತ್ಪನ್ನಕ್ಕೆ(ಉಃಆಕ) ಶೇ.8.4ರಷ್ಟು ಕೊಡುಗೆ ನೀಡುತ್ತದೆ. ಇದು 2024-25ನೇ ಸಾಲಿನಲ್ಲಿ ತನ್ನ ಪ್ರಭಾವಶಾಲಿ ಬೆಳವಣಿಗೆಯ ಪಥವನ್ನು ಮುಂದುವರೆಸಿದೆ ಮತ್ತು ಶೇ. 7.4 ರಷ್ಟು ಉಖಆಕ ಬೆಳವಣಿಗೆಯ ದರವನ್ನು ಸಾಧಿಸಲು ಸಜ್ಜಾಗಿದೆ. ಇದು ರಾಷ್ಟ್ರೀಯ ಬೆಳವಣಿಗೆಯ ದರ ಶೇ. 6.4 ಕ್ಕಿಂತ ಹೆಚ್ಚಾಗಿದೆ" ಎಂದು ಸಿಎಂ ಒತ್ತಿ ಹೇಳಿದರು.

ರಾಜ್ಯ ಸರ್ಕಾರದ ಗ್ಯಾರಂಟಿಗಳು ಅಭಿವೃದ್ಧಿಯನ್ನು ತಿಂದು ಹಾಕುತ್ತಿವೆ ಎಂದು ದೂರುತ್ತಿದ್ದ ಆಡಳಿತಾರೂಢ ಕಾಂಗ್ರೆಸ್ ಮತ್ತು ವಿರೋಧ ಪಕ್ಷಗಳ ಶಾಸಕರನ್ನು ಸಮಾಧಾನಪಡಿಸುವ ಯತ್ನದಲ್ಲಿ ಸಿಎಂ ಸಿದ್ದರಾಮಯ್ಯ ಅವರು 8,000 ಕೋಟಿ ರೂ.ಗಳ ಸಿಎಂ ಮೂಲಸೌಕರ್ಯ ಅಭಿವೃದ್ಧಿ ಕಾರ್ಯಕ್ರಮ(ಅಒಖಆಕ) ಎಂಬ ಹೊಸ ಯೋಜನೆಯನ್ನು ಘೋಷಿಸಿದ್ದಾರೆ.

ಈ ಯೋಜನೆಯು ಎಲ್ಲಾ 224 ವಿಧಾನಸಭಾ ಕ್ಷೇತ್ರಗಳಲ್ಲಿ ಸಣ್ಣ ನೀರಾವರಿ, ರಸ್ತೆಗಳು ಮತ್ತು ನಗರ ಮೂಲಸೌಕರ್ಯಗಳ ಮೇಲೆ ಕೇಂದ್ರೀಕರಿಸುವ ಮೂಲಕ ರಾಜ್ಯಾದ್ಯಂತ ಸಮತೋಲಿತ ಅಭಿವೃದ್ಧಿಯನ್ನು ಖಚಿತಪಡಿಸುತ್ತದೆ.

ಇನ್ನು ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ವಿವಿಧ ಯೋಜನೆಗಳನ್ನು ಘೋಷಿಸಿದ ಸಿಎಂ, ರಾಜಧಾನಿ ಬೆಂಗಳೂರಿನ ಅಭಿವೃದ್ಧಿಗಾಗಿ ದೇವನಹಳ್ಳಿಯವರೆಗೆ ಮೆಟ್ರೋ ರೈಲು ಯೋಜನೆಯ ವಿಸ್ತರಣೆ ಸೇರಿದಂತೆ ಬಂಪರ್ ಕೊಡುಗೆ ನೀಡಿದ್ದಾರೆ. ಈ ಬಜೆಟ್ ನಲ್ಲಿ ಶಿಕ್ಷಣ ಇಲಾಖೆಗೆ 45,286 ಕೋಟಿ ರೂಪಾಯಿ ಅನುದಾನ ನೀಡಲಾಗಿದೆ. ಹಾಗೆಯೇ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ 34,955 ಕೋಟಿ, ಇಂಧನ ಇಲಾಖೆಗೆ 26,896 ಕೋಟಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್?ಗೆ 26,735 ಕೋಟಿ, ನೀರಾವರಿ ಇಲಾಖೆಗೆ 22,181 ಕೋಟಿ, ನಗರಾಭಿವೃದ್ಧಿ ಮತ್ತು ವಸತಿ ಇಲಾಖೆಗೆ 21,405 ಕೋಟಿ ಹಾಗೂ ಒಳಾಡಳಿತ ಮತ್ತು ಸಾರಿಗೆ ಇಲಾಖೆಗೆ 20,625 ಕೋಟಿ ಹಣ ಮೀಸಲಿಡಲಾಗಿದೆ.

ಹೀಗೆ ಎಲ್ಲ ಇಲಾಖೆಗಳಿಗೂ ಅನುಕೂಲಕ್ಕೆ ಅನುಗುಣವಾಗಿ ಬಜೆಟ್ ಹಂಚಿಕೆ ಮಾಡಲಾಗಿದೆ. ಹೊಸ ಯೋಜನೆ, ನೂತನ ಘೋಷಣೆಗಳೊಂದಿಗೆ ಸರ್ಕಾರ ಸಮಗ್ರ ರಾಜ್ಯದ ಅಭಿವೃದ್ಧಿಯ ಗುರಿ ಹೊಂದಿದೆ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

ಹೆಚ್ಚಿದ ಸಾಲದ ಹೊರೆ

2025-26ನೇ ಸಾಲಿನಲ್ಲಿ ಅಂದಾಜು 1,16,000 ಕೋಟಿ ರೂ. ಸಾಲದ ಮೊರೆ ಹೋಗಲು ಸಿಎಂ ಸಿದ್ದರಾಮಯ್ಯ ತೀರ್ಮಾನಿಸಿದ್ದಾರೆ. 2024-25 ಸಾಲಿನಲ್ಲಿ 1,05,246 ಕೋಟಿ ರೂ. ಸಾಲದ ಮೊರೆ ಹೋಗಲಾಗಿತ್ತು. ಆ ಮೂಲಕ ಈ ಬಾರಿ 10,754 ಕೋಟಿ ರೂ. ಹೆಚ್ಚುವರಿ ಸಾಲದ ಮೊರೆ ಹೋಗಲಾಗಿದೆ.

ಈ 1,16,000 ಕೋಟಿ ರೂ. ಸಾಲದ ಪೈಕಿ ಕೇಂದ್ರ ಸರ್ಕಾರದಿಂದ 7,000 ಕೋಟಿ ರೂ., ಬಹಿರಂಗ ಮಾರುಕಟ್ಟೆಯಿಂದ 1,05,000 ಕೋಟಿ ಹಾಗೂ ಎಲ್ಐಸಿ, ಎನ್ಎಸ್ಎಸ್ಎಫ್, ಎನದ ಸಿಡಿಸಿ ಮತ್ತು ಆರ್ ಐಡಿಎಫ್ ಗಳಿಂದ 4,000 ಕೋಟಿ ರೂ. ಸಾಲ ಪಡೆಯಲು ಅಂದಾಜಿಸಲಾಗಿದೆ. ಆ ಮೂಲಕ 2025-26ರ ಅಂತ್ಯಕ್ಕೆ ರಾಜ್ಯದ ಒಟ್ಟು ಹೊಣೆಗಾರಿಕೆಗಳು 7,64,655 ಕೋಟಿ ರೂ.ಗಳು ಎಂದು ಅಂದಾಜಿಸಲಾಗಿದ್ದು, ಜಿ.ಎಸ್.ಡಿ.ಪಿ ಯ ಶೇ. 24.91ರಷ್ಟಿದೆ.

## ಪೋಕ್ಸೋ ಪ್ರಕರಣ; ಆರೋಪಿಗೆ ಜೀವಾವಧಿ ಶಿಕ್ಷೆ, ಗರ್ಭಪಾತ ಮಾಡಿದ ವೈದ್ಯನಿಗೆ 5 ವರ್ಷ ಜೈಲು

ಮಲ್ಲಮ್ಮ ನುಡಿ ವಾರ್ತೆ
ಬೀದರ. ಮಾ. 07 : ಪೋಕ್ಸೋ ಪ್ರಕರಣವೊಂದರ ಆರೋಪಿಗೆ ಜೀವಾವಧಿ ಶಿಕ್ಷೆ ಹಾಗೂ 1 ಲಕ್ಷ ರೂ. ದಂಡ ಮತ್ತು ಗರ್ಭಪಾತ ಮಾಡಿದ ವೈದ್ಯನಿಗೆ 5 ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ 5 ಲಕ್ಷ ರೂ. ದಂಡ ವಿಧಿಸಿ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯ ಆದೇಶ ಹೊರಡಿಸಿದೆ. ಸಂತೋಷ್ ಮೇತ್ರೆ ಎಂಬಾತ ಜೀವಾವಧಿ ಶಿಕ್ಷೆಗೆ ಒಳಗಾದ ಆರೋಪಿಯಾಗಿದ್ದು, ಡಾ. ವೈಜಿನಾಥ್ ಬಿರಾದಾರ್ ಗರ್ಭಪಾತ ಮಾಡಿಸಿ ಶಿಕ್ಷೆಗೆ ಗುರಿಯಾದ ವೈದ್ಯ. 2021 ರಲ್ಲಿ ಸಂತಪುರ ಗ್ರಾಮದಲ್ಲಿ 14 ವರ್ಷದ ಬಾಲಕಿ ಮೇಲೆ ಸಂತೋಷ್ ನಿರಂತರವಾಗಿ ಅತ್ಯಾಚಾರ ಎಸಗಿದ್ದ. 2022 ರಲ್ಲಿ ಆ ಬಾಲಕಿ ಗರ್ಭವತಿಯಾಗಿರುವುದು ದೃಢಪಟ್ಟಿದೆ. ನಂತರ ಖಾಸಗಿ ಆಸ್ಪತ್ರೆಯೊಂದರಲ್ಲಿ ಡಾ. ವೈಜಿನಾಥ್ ಬಿರಾದಾರ್ ಎಂಬ ವೈದ್ಯ ಆ ಬಾಲಕಿಯ ಗರ್ಭಪಾತ ಮಾಡಿಸಿರುತ್ತಾನೆ ಎಂದು ಸಂತಪುರ ಸಿಡಿಪಿಓ ಭೀಮಸೇನ್ ಚವ್ಹಾಣ ಅವರು 2023 ರಲ್ಲಿ ಸಂತಪುರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸುತ್ತಾರೆ.

ಅಂದಿನ ಪಿಎಸ್ಐ ಮೆಹಬೂಬ್ ಅಲಿ ಅವರು ಪ್ರಕರಣ ದಾಖಲಿಸಿಕೊಂಡಿರುತ್ತಾರೆ. ಔರಾದ್ ನ ಸಿಪಿಐ ರಘುವೀರ ಸಿಂಗ್ ಠಾಕೂರ್ ಅವರು ಈ ಪ್ರಕರಣ ಬಗ್ಗೆ ಕೂಲಂಕೂಶವಾಗಿ ತನಿಖೆ ಪೂರ್ಣಗೊಳಿಸಿ 2023 ರಲ್ಲಿ ಆರೋಪಿತರ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣೆ ಪತ್ರ ಸಲ್ಲಿಸಿರುತ್ತಾರೆ. ಇದೀಗ ಜಿಲ್ಲಾ ಹಾಗೂ ಸತ್ರ ನ್ಯಾಯಾಲಯವು ಈ ಪ್ರಕರಣದ ಬಗ್ಗೆ ತೀರ್ಪು ಪ್ರಕಟಿಸಿದ್ದು, ಆರೋಪಿಗಳಿಗೆ ಶಿಕ್ಷೆ ವಿಧಿಸಿದೆ.

## ಸರ್ವ ಜನಾಂಗದ ಹಿತ ಕಾಯುವ ಬಜೆಟ್



ಮಲ್ಲಮ್ಮ ನುಡಿ ವಾರ್ತೆ
ಹುಮನಾಬಾದ:ಮಾ.7: ಜನಪ್ರಿಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಇಂದು ಮಂಡಿಸಿದ ಬಜೇಟ್ ರಾಜ್ಯದ ಸರ್ವಾಂಗೀಣ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡಿದೆ. ಸರ್ವ ಜನಾಂಗದ ಹಿತವನ್ನು ಬಜೇಟ್ ನಲ್ಲಿ ಕಾಯಲಾಗಿದೆ. ಕಲ್ಯಾಣ ಕರ್ನಾಟಕ ಭಾಗದ ಸಮಗ್ರ ಪ್ರಗತಿಗೆ ಪೂರಕವಾಗಿ ಅನೇಕ ಯೋಜನೆಗಳನ್ನು ಘೋಷಿಸುವ ಮೂಲಕ ಹಿಂದುಳಿದ ವರ್ಗದ ಅಭಿವೃದ್ದಿಗೆ ಕಾಂಗ್ರೆಸ್ ಬದ್ದ ಎಂಬುವುದನ್ನು ಸಿಎಂ ಸಿದ್ದರಾಮಯ್ಯನವರು ಬಜೇಟ್ ನಲ್ಲಿ ಸಾಬೀತು ಪಡಿಸಿದ್ದಾರೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ ತಿಳಿಸಿದ್ದಾರೆ.

ಬೀದರನ ಬ್ರಿಮ್ಸ್ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಪತ್ತೆ ವಿಭಾಗ ಆರಂಭಿಸುವ ಘೋಷಣೆಯಿಂದಾಗಿ ಮಾರಕ ಕ್ಯಾನ್ಸರ್ ರೋಗವನ್ನು ಆರಂಭಿಕ ಹಂತದಲ್ಲೇ ಪತ್ತೆ ಹಚ್ಚಲು ಜಿಲ್ಲೆಯ ಜನರಿಗೆ ಸಹಾಯವಾಗಲಿದೆ. ಬಸವಕಲ್ಯಾಣ ವಿಭಾಗೀಯ ಆಸ್ಪತ್ರೆಯನ್ನು ಜಿಲ್ಲಾ ಆಸ್ಪತ್ರೆಯಾಗಿ, ಭಾಲ್ಕಿಯ 100 ಹಾಸಿಗೆಗಳ ಆಸ್ಪತ್ರೆಯನ್ನು 150 ಹಾಸಿಗೆಗಳ ವಿಭಾಗೀಯ ಆಸ್ಪತ್ರೆಯಾಗಿ ಮೇಲ್ದರ್ಜೆಗೇರಿಸುವುದಾಗಿ ಪ್ರಕಟಿಸಿದ್ದು, ರೋಗಿಗಳಿಗೆ ಹೆಚ್ಚಿನ ವೈದ್ಯಕೀಯ ಸೇವೆಗಳು ಸಿಗಲಿವೆ ಎಂದು ತಿಳಿಸಿದ್ದಾರೆ.

ಮುಖ್ಯಮಂತ್ರಿ ಅವರು ಸರ್ವರ ಹಿತ ಹಾಗೂ ರಾಜ್ಯದ ಅಭಿವೃದ್ಧಿಯನ್ನು ಗಮನದಲ್ಲಿ ಇಟ್ಟುಕೊಂಡು ಬಜೆಟ್ ಮಂಡಿಸಿದ್ದಾರೆ. ಇದು, ಜನಪರ ಹಾಗೂ ಮಾದರಿ ಬಜೆಟ್ ಆಗಿದೆ ಎಂದು ಹೇಳಿದ್ದಾರೆ.

## ಬೈಕ್‌ಗಳ ಮಧ್ಯ ಡಿಕ್ಕಿ: ನಾಲ್ವರ ಸಾವು



ಮಲ್ಲಮ್ಮ ನುಡಿ ವಾರ್ತೆ
ಕಲಬುರಗಿ:ಮಾ.7:ಜಿಲ್ಲೆಯ ಸೇಡಂ ತಾಲೂಕಿನ ಹಾಬಾಳ (ಟಿ) ಗ್ರಾಮದ ಬಳಿ ಎರಡು ಬೈಕುಗಳ ಮಧ್ಯೆ ಸಂಭವಿಸಿದ ಡಿಕ್ಕಿಯಲ್ಲಿ ಇಬ್ಬರು ಸ್ಥಳದಲ್ಲಿ ಮೃತಪಟ್ಟು, ಉಳಿದಿಬ್ಬರು ಆಸ್ಪತ್ರೆಯಲ್ಲಿ ಮೃತಪಟ್ಟ ಘಟನೆ ನಡೆದಿದೆ.

ಸಿದ್ದು ಕಿಷನ್ (25), ಸುರೇಶ್ ಪುಂಡರೆಡ್ಡಿ(20), ಮಲ್ಲಿಕಾರ್ಜುನ ರೇವಣಪ್ಪ ಪೂಜಾರಿ (20) ಹಾಗೂ ಪ್ರಕಾಶ್ ತಿಪ್ಪಣ್ಣ ಪೂಜಾರಿ (19) ಮೃತ ದುರ್ದೈವಿಗಳಾಗಿದ್ದಾರೆ. ಹಾಬಾಳ ಟಿ ಗ್ರಾಮದಿಂದ ಬರುತ್ತಿದ್ದ ಬೈಕಿಗೆ ಸೇಡಂ ಕಡೆಯಿಂದ ಹೊರಟಿದ್ದ ಬೈಕ್ ಅಪ್ಪಳಿಸಿದೆ. ಅಪಘಾತದ ತೀವ್ರತೆಗೆ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಎರಡೂ ಬೈಕುಗಳು ಸಂಪೂರ್ಣ ಛಿದ್ರಗೊಂಡಿರುವ ರೀತಿ ನೋಡಿದರೆ ಅತಿಯಾದ ವೇಗವೇ ದುರ್ಘಟನೆಗೆ ಕಾರಣ ಎನ್ನಲಾಗುತ್ತಿದೆ.

ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಸ್ಥಳಕ್ಕೆ ಸೇಡಂ ಠಾಣೆಯ ಪೊಲೀಸರು ಭೇಟಿ ನೀಡಿ ಪರೀಶಿಲನೆ ನಡೆಸಿದ್ದು, ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

## ಜನಪರ ಬಜೆಟ್



ಮಲ್ಲಮ್ಮ ನುಡಿ ವಾರ್ತೆ
ಹುಮನಾಬಾದ:ಮಾ.7: ಪ್ರಸಕ್ತ ಸಾಲಿನ ರಾಜ್ಯ ಬಜೆಟನಲ್ಲಿ ವಿವಿಧ ಕ್ಷೇತ್ರಗಳಿಗೆ ಮಹತ್ವದ ಅನುದಾನಗಳನ್ನು ಘೋಷಿಸಿದ್ದು ಒಟ್ಟು 4,09,549 ಕೋಟಿ ರೂಪಾಯಿಗಳ ಬಜೆಟ್ ಗಾತ್ರದಲ್ಲಿ, ಮುಖ್ಯಮಂತ್ರಿಗಳು ವಿವಿಧ ಯೋಜನೆಗಳಿಗೆ ಅನುದಾನ ಮೀಸಲಿಡುವ ಮೂಲಕ ಜನಪರ, ಅಭಿವೃದ್ಧಿ ಪರ ಬಜೆಟ್ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯ ಚಂದ್ರಶೇಖರ ಬಿ ಪಾಟೀಲ ಬಜೆಟ್‌ನ್ನು ಪ್ರಶಂಸಿಸಿದ್ದಾರೆ.

ಬಿಸಿಯೂಟ ಕಾರ್ಯಕತೆ-ಯರ ಗೌರವಧನವನ್ನು 1,000 ಹೆಚ್ಚಳ ಮಾಡಿರುವುದು ಅವರ ಜೀವನಮಟ್ಟ ಸುಧಾರಿಸಲು ಸಹಾಯಕವಾಗಲಿದೆ.

ಮುಖ್ಯಮಂತ್ರಿಗಳು ಬಜೆಟ್ ಅನ್ನು "ಬಜೆಟ್ ಎಂಬುದು ಬರಿ ಹಾಳೆಗಳ ಮೇಲಿನ ಲೆಕ್ಕವಲ್ಲ, ಕರ್ನಾಟಕ ರಾಜ್ಯದ ಏಳು ಕೋಟಿ ಕನ್ನಡಿಗರ ಭವಿಷ್ಯ ರೂಪಿಸುವ ಕೈಪಿಡಿ" ಎಂದು ವರ್ಣಿಸಿದ್ದು, ಅದಕ್ಕೆ ತಕ್ಕಂತೆ ರಾಜ್ಯದ ಸಮಗ್ರ ಅಭಿವೃದ್ಧಿಗೆ ಸಹಾಯಕವಾಗುವ ಅಂಶಗಳನ್ನು ಬಜೆಟ್ ಹೊಂದಿದೆ ಎಂದಿದ್ದಾರೆ.

ಸಿದ್ದರಾಮಯ್ಯನವರ 16ನೇ ದಾಖಲೆ ಬಜೆಟ್ ಇದಾಗಿದೆ ಕಲ್ಯಾಣ ಕರ್ನಾಟಕ ಭಾಗಕ್ಕೆ ಆದ್ಯತೆ ಕೊಟ್ಟು ಗ್ಯಾರಂಟಿ ಯೋಜನೆಗಳಿಗೆ ಅನುದಾನ ಕೊಟ್ಟ ಜನಪರ ಬಜೆಟ್ ಇದು ಆಗಿದೆ ಎಂದು ಅವರು ತಿಳಿಸಿದ್ದಾರೆ.

## ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಬಜೆಟ್ ನಲ್ಲಿ ಒತ್ತು: ಈಶ್ವರ ಖಂಡ್ರೆ



ಮಲ್ಲಮ್ಮ ನುಡಿ ವಾರ್ತೆ
ಬೀದರ: ಮಾ. 07: ಕಲ್ಯಾಣ ಕರ್ನಾಟಕದ ಅಭಿವೃದ್ಧಿಗಾಗಿ ಈ ಸಾಲಿನ ಬಜೆಟ್ ನಲ್ಲಿಯೂ 5 ಸಾವಿರ ಕೋಟಿ ರೂ. ಯೋಜನೆ ರೂಪಿಸಲು ಅವಕಾಶ ನೀಡಲಾಗಿದ್ದು, ಇದು ನುಡಿದಂತೆ ನಡೆಯುವ ನಮ್ಮ ಸರ್ಕಾರದ ಬದ್ಧತೆಯನ್ನು ಸಾಬೀತು ಪಡೆಸುತ್ತದೆ ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ಹೇಳಿದ್ದಾರೆ.

ಬಜೆಟ್ ಬಗ್ಗೆ ಪ್ರತಿಕ್ರಿಯೆ ನೀಡಿದ ಅವರು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ 5367 ಶಿಕ್ಷಕರ ಹುದ್ದೆಗಳ ಭರ್ತಿಯ ನಿರ್ಧಾರ ಶಾಲೆಗಳ ಶಿಕ್ಷಕರ ಕೊರತೆಯನ್ನು ನಿವಾರಿಸಲಿದ್ದರೆ, ತೊಗರಿಬೆಳೆಗೆ 450 ರೂ. ಹೆಚ್ಚುವರಿ ಪ್ರೋತ್ಸಾಹ ಧನ ಹೆಚ್ಚಳ ನಮ್ಮ ಭಾಗದ ರೈತರ ಪಾಲಿಗೆ ಆಶಾಕಿರಣವಾಗಿದೆ ಎಂದರು. ಕಲ್ಯಾಣ ಕರ್ನಾಟಕ ಸಂಪೂರ್ಣ ಆರೋಗ್ಯ ಅಭಿವೃದ್ಧಿ ಯೋಜನೆ ಅಡಿ, ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ಹಾಗೂ ಕಲ್ಯಾಣ ಕರ್ನಾಟಕ ಭಾಗದ ಆರೋಗ್ಯ ಸೂಚ್ಯಂಕ ವೃದ್ಧಿಸಲು ಒಟ್ಟು 873 ಕೋಟಿ ರೂ. ವೆಚ್ಚದಲ್ಲಿ ಆರೋಗ್ಯ ವ್ಯವಸ್ಥೆ ಬಲಪಡಿಸುವ ಮತ್ತು ಬೀದರ್ ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ಕ್ಯಾನ್ಸರ್ ಪತ್ತೆ ವಿಭಾಗ ಆರಂಭಿಸುತ್ತಿರುವ ನಿರ್ಧಾರ ಸ್ವಾಗತಾರ್ಹ ಎಂದು ಈಶ್ವರ ಖಂಡ್ರೆ ಹೇಳಿದ್ದಾರೆ.

## ಅಭಿವೃದ್ಧಿ ಪರ ಬಜೆಟ್



ಮಲ್ಲಮ್ಮ ನುಡಿ ವಾರ್ತೆ
ಹುಮನಾಬಾದ:ಮಾ.7: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಿಸಿರುವ ರಾಜ್ಯ ಬಜೆಟ್ ಅಭಿವೃದ್ಧಿ ಪರವಾದ ಬಜೆಟ್ ಎಂದು

ಬಜೆಟ್‌ನಲ್ಲಿ ಮುಖ್ಯಮಂತ್ರಿ ಅವರು ಜನರ ಸ್ವಾವಲಂಬಿ ಬದುಕಿಗೆ ನೆರವಾಗುವ ಗ್ಯಾರಂಟಿ ಯೋಜನೆಗಳ ಮುಂದುವರಿಕೆ ಜತೆಗೆ ಅನೇಕ ಅಭಿವೃದ್ಧಿ ಪರ ಯೋಜನೆಗಳನ್ನು ಘೋಷಿಸಿದ್ದಾರೆ ಎಂದು ವಿಧಾನ ಪರಿಷತ್ ಸದಸ್ಯರಾದ ಭೀಮರಾವ ಬಿ ಪಾಟೀಲ ಹೇಳಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ರೂ. 5 ಸಾವಿರ ಕೋಟಿ ಕಾಯ್ದಿರಿಸಿದ್ದಾರೆ. ಶಿಕ್ಷಕರ 5,267 ಖಾಲಿ ಹುದ್ದೆಗಳ ಭರ್ತಿ ಮಾಡುವುದಾಗಿ ಪ್ರಕಟಿಸಿದ್ದಾರೆ. ಇದು, ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

## ಬೀದರ್‌ನಲ್ಲಿ ಲೋಕಾಯುಕ್ತ ದಾಳಿ ಮೂರು ತಂಡಗಳಿಂದ ಪರಿಶೀಲನೆ



ಮಲ್ಲಮ್ಮ ನುಡಿ ವಾರ್ತೆ
ಬೀದರ. ಮಾ. 07 : ರಾಜ್ಯದ ವಿವಿಧೆಡೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಕಲಬುರಗಿ ರಾಜ್ಯ ಹೆದ್ದಾರಿ ಅಭಿವೃದ್ಧಿ ಇಲಾಖೆಯ ಮುಖ್ಯ ಯೋಜನಾಧಿಕಾರಿ ಜಗನ್ನಾಥ

(2ನೇ ಪುಟ ನೋಡಿ)

## ಇಂದು ಮುಖ್ಯಮಂತ್ರಿಗಳಿಂದ ಕಲ್ಯಾಣ ಪಥ ಯೋಜನೆಯ ಪ್ರಾರಂಭೋತ್ಸವಕ್ಕೆ ಚಾಲನೆ

ಮಲ್ಲಮ್ಮ ನುಡಿ ವಾರ್ತೆ
ಕಲಬುರಗಿ,ವಾ.07.(ಕ.ವಾ.)-ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ಬೆಂಗಳೂರು ಇವರ ವತಿಯಿಂದ ಕಲ್ಯಾಣ ಪಥ ಯೋಜನೆಯಡಿ ಕಲ್ಯಾಣ ಕರ್ನಾಟಕದ 38 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಮಾದರಿಯಲ್ಲಿ ಒಟ್ಟು 1166 ಕಿ.ಮೀ. ಉದ್ದದ ರಸ್ತೆಗಳನ್ನು 1000 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಯೋಜನೆಯ ಪ್ರಾರಂಭೋತ್ಸವ) ಕಲ್ಯಾಣ ಪಥ ಯೋಜನೆಯ ಪ್ರಾರಂಭೋತ್ಸವದ ಉದ್ಘಾಟನಾ ಸಮಾರಂಭವನ್ನು ಮಾರ್ಚ್ 8 ರಂದು ಶನಿವಾರ ಬೆಳಿಗ್ಗೆ 11.30 ಗಂಟೆಗೆ ಜೇವರ್ಗಿ ತಾಲೂಕಿನ ಕಟ್ಟಿ ಸಂಗಾವಿಯ ತಾಯಿ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆ ಹತ್ತಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಕಲ್ಯಾಣ ಪಥ ಯೋಜನೆಯ ಪ್ರಾರಂಭೋತ್ಸವಕ್ಕೆ ಚಾಲನೆ ನೀಡುವರು. ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು

(2ನೇ ಪುಟ ನೋಡಿ)

## ಒಂದನೇ ಪುಟದಿಂದ

### ಮೂರು ತಂಡಗಳಿಂದ ಪರಿಶೀಲನೆ

ಹಾಲಿಂಗೆ ಮನೆ ಲೋಕಾಯುಕ್ತ ಅಧಿಕಾರಿಗಳ ದಾಳಿ ನಡೆದಿದ್ದು, ಬೀದರ್‌ನಲ್ಲೂ ಕೂಡ ದಾಳಿ ನಡೆದಿದೆ. ಕಪ್ಪತಗುಡ್ಡದಲ್ಲಿ ಅಗ್ನಿ ಅವಘಡ ; ಅಪಾರ ಪ್ರಮಾಣದ ಹುಲ್ಲುಗಾವಲು ಬೆಂಕಿಗಾಹುತಿ ಬೀದರನಲ್ಲೂ ಮೂರು ಕಡೆ ಲೋಕಾಯುಕ್ತ ಅಧಿಕಾರಿಗಳ ತಂಡ ದಿಂದ ದಾಳಿ ನಡೆಸಿದೆ. ಬಸವಕಲ್ಯಾಣ ತಾಲೂಕಿನ ಧನ್ನೂರಾ ಕೆ ಗ್ರಾಮದಲ್ಲಿ ಇರುವ ಜಗನ್ನಾಥ ಹಾಲಿಂಗೆ ಅವರ ಫಾರ್ಮ್ ಹೌಸ್ ಹಾಗೂ ಭಾಲ್ಕಿ ತಾಲೂಕಿನ ನೀಲಮನಹಳ್ಳಿ ಗ್ರಾಮದಲ್ಲಿನ ಫಾರ್ಮ್ ಹೌಸ್ ಹಾಗೂ ಬೀದರ್ ನಗರದ ಶಿವು ನಗರದಲ್ಲಿರುವ ಅವರ ಸಹೋದರರಾದ ನಾಗನಾಥ ಹಾಲಿಂಗೆ ಮನೆಯ ಮೇಲೂ ದಾಳಿ ನಡೆಸಿರುವ ಲೋಕಾಯುಕ್ತ ಅಧಿಕಾರಿಗಳು ಕಡತಗಳ ಪರಿಶೀಲನೆ ನಡೆಸುತ್ತಿದ್ದಾರೆ.

### ಪಥ ಯೋಜನೆಯ ಪ್ರಾರಂಭೋತ್ಸವಕ್ಕೆ ಚಾಲನೆ

ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ರಾಜ್ಯದ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಚಿವ ಬಿ.ಜೆಡ್. ಜಮೀರ್ ಅಹ್ಮದ್ ಖಾನ್, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪ ದರ್ಶನಾಪೂರ, ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಸಚಿವ ಈಶ್ವರ ಬಿ. ಖಂಡ್ರೆ, ಪೌರಾಡಳಿತ ಮತ್ತು ಹಜ್ ಸಚಿವ ರಹೀಮ್ ಖಾನ್, ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ ಸಂಗಪ್ಪ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಡಿ. ಸುಧಾಕರ್, ಸಣ್ಣ ನೀರಾವರಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಭೋಸರಾಜು, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಂಪನಗೌಡ ಬಾದರ್ಲಿ, ಅಫಜಲಪುರ ಶಾಸಕ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷರಾದ ಎಂ.ವೈ. ಪಾಟೀಲ, ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ, ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಹನಮಗೌಡ ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್, ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಜೆ.ಎನ್. ಗಣೇಶ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷ ಬಸನಗೌಡ ತುರುವಿಹಾಳ, ಕರ್ನಾಟಕ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್ ಅವರು ಗೌರವ ಉಪಸ್ಥಿತಿವಹಿಸುವರು. ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್ ಅವರು ಕಾರ್ಯಕ್ರಮದ ಅಧ್ಯಕ್ಷತೆವಹಿಸುವರು.

ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ, ರಾಯಚೂರ ಲೋಕಸಭಾ ಸದಸ್ಯ ಜಿ. ಕುಮಾರ್ ನಾಯಕ, ಬಳ್ಳಾರಿ ಲೋಕಸಭಾ ಸದಸ್ಯ ಈ. ತುಕಾರಾಮ್, ದಾವಣಗೆರೆ ಸಂಸದ ಡಾ. ಪ್ರಭಾ ಮಲ್ಲಿಕಾರ್ಜುನ್, ಕೊಪ್ಪಳ ಲೋಕಸಭಾ ಸದಸ್ಯ ರಾಜಶೇಖರ್ ಬಸವರಾಜ ಹಿಟ್ನಾಳ್, ಬೀದರ ಲೋಕಸಭಾ ಸದಸ್ಯ ಸಾಗರ ಈಶ್ವರ ಖಂಡ್ರೆ ಹಾಗೂ ಬಳ್ಳಾರಿ ರಾಜ್ಯಸಭಾ ಸದಸ್ಯ ಡಾ. ಸೈಯದ್ ನಾಸೀರ ಹುಸೇನ್ ಗೌರವಾನ್ವಿತರ ಅತಿಥಿಗಳಾಗಿ ಪಾಲ್ಗೊಳ್ಳುವರು.

ಕಾರ್ಯಕ್ರಮದಲ್ಲಿ ಶಾಸಕರುಗಳಾದ ಪ್ರಭು ಬಿ. ಚವ್ಹಾಣ, ಬಿ. ನಾಗೇಂದ್ರ, ಜಿ. ಹಂಪಯ್ಯ ನಾಯಕ, ಮಾನಪ್ಪ ಡಿ. ವಜ್ಜಲ್, ಡಾ. ಎಸ್. ಶಿವರಾಜ್ ಪಾಟೀಲ, ಕೆ. ರಾಘವೇಂದ್ರ ಹಿಟ್ನಾಳ್, ಹೆಚ್.ಆರ್. ಗವಿಯಪ್ಪ, ಕೆ. ನೇಮಿರಾಜ ನಾಯ್ಕ್, ಬಿ.ಎಮ್. ನಾಗರಾಜ್, ಶರಣು ಸಲಗರ, ಬಸವರಾಜ ಮತ್ತಿಮಡು, ಡಾ. ಅವಿನಾಶ ಉ. ಜಾಧವ, ಚನ್ನಾರೆಡ್ಡಿ ಪಾಟೀಲ ತುನ್ನೂರ್, ಅಲ್ಲಮಪ್ರಭು ಪಾಟೀಲ, ಬಿ. ದೇವೇಂದ್ರಪ್ಪ, ಗಾಲಿ ಜನಾರ್ಧನ ರೆಡ್ಡಿ, ಲತಾ ಮಲ್ಲಿಕಾರ್ಜುನ, ಈ. ಅನ್ನಪೂರ್ಣ, ಡಾ. ಶೈಲೇಂದ್ರ ಕೆ. ಬೆಲ್ದಾಳೆ, ಎಸ್.ಟಿ. ಶ್ರೀನಿವಾಸ, ಡಾ. ಸಿದ್ದಲಿಂಗಪ್ಪ ಎನ್. ಪಾಟೀಲ, ಶರಣಗೌಡ ಕಂದಕೂರ, ಕೃಷ್ಣ ನಾಯ್ಕ್, ರಾಜಾವೇಣುಗೋಪಾಲ ನಾಯಕ, ನಾರಾ ಭರತರೆಡ್ಡಿ, ಕರೆಮ್ಮ ಜಿ. ನಾಯಕ ಗೌರವಾನ್ವಿತರಾಗಿ ಪಾಲ್ಗೊಳ್ಳುವರು.

ವಿಧಾನ ಪರಿಷತ್ ಶಾಸಕರುಗಳಾದ ಶಶೀಲ ಜಿ. ನಮೋಶಿ, ಡಾ. ಬಿ.ಜಿ.ಪಾಟೀಲ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ತಿಮ್ಮಣ್ಣಪ್ಪ ಕಮಕನೂರ, ಸುನೀಲ್ ವಲ್ಲ್ಯಾಪುರೆ, ಡಾ. ಸಾಬಣ್ಣ ತಳವಾರ, ವೈ.ಎಂ. ಸತೀಶ, ಶರಣಗೌಡ ಅ. ಪಾಟೀಲ ಬಯ್ಯಾಪುರ, ಭೀಮರಾವ ಬಿ. ಪಾಟೀಲ್, ಹೇಮಲತಾ ನಾಯಕ, ಬಸನಗೌಡ ಬಾದರ್ಲಿ, ಡಾ. ಎಂ.ಜಿ. ಮೂಳೆ, ಜಗದೇವ ಗುತ್ತೇದಾರ್ ಹಾಗೂ ಎ. ವಸಂತಕುಮಾರ್ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು. ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ, ಅಭಿವೃದ್ಧಿ ಆಯುಕ್ತರು ಹಾಗೂ ಅಪರ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯರಾಜ್ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸುವರು.

## ಅಭಿವೃದ್ಧಿ ಪರ ಬಜೆಟ್



ಮಲ್ಲಮ್ಮ ನುಡಿ ವಾರ್ತೆ ಬೀದರ. ಮಾ.07: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ ಮಂಡಿಸಿರುವ ರಾಜ್ಯ ಬಜೆಟ್ ಅಭಿವೃದ್ಧಿ ಪರವಾದ ಬಜೆಟ್ ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ದತ್ತಾತ್ರಿ ಮೂಲಗೆ ಬಣ್ಣಿಸಿದ್ದಾರೆ.

ಬಜೆ???ನಲ್ಲಿ ಮುಖ್ಯಮಂತ್ರಿ ಅವರು ಜನರ ಸ್ವಾವಲಂಬಿ ಬದುಕಿಗೆ ನೆರವಾಗುವ ಗ್ಯಾರಂಟಿ ಯೋಜನೆಗಳ ಮುಂದುವರಿಕೆ ಜತೆಗೆ ಅನೇಕ ಅಭಿವೃದ್ಧಿ ಪರ ಯೋಜನೆಗಳನ್ನು ಘೋಷಿಸಿದ್ದಾರೆ ಎಂದು ಹೇಳಿದ್ದಾರೆ.

ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ ರೂ. 5 ಸಾವಿರ ಕೋಟಿ ಕಾಯ್ದಿರಿಸಿದ್ದಾರೆ. ಶಿಕ್ಷಕರ 5,267 ಖಾಲಿ ಹುದ್ದೆಗಳ ಭರ್ತಿ ಮಾಡುವುದಾಗಿ ಪ್ರಕಟಿಸಿದ್ದಾರೆ. ಇದು, ಕಲ್ಯಾಣ ಕರ್ನಾಟಕ ಭಾಗದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಎಂದು ತಿಳಿಸಿದ್ದಾರೆ.

## ರಾಜ್ಯ ಸರ್ಕಾರದ ಬಜೆಟ್ ಸ್ವಾಗತಾರ್ಹ





ಮಲ್ಲಮ್ಮ ನುಡಿ ವಾರ್ತೆ ಬೀದರ. ಮಾ. 07 : ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯವರು ಮಂಡಿಸಿದ 16ನೇ ಬಜೆಟ್ ದಾಖಲೆಯ ರೂ 4 ಲಕ್ಷ ಕೋಟಿಯ ಬೃಹತ್ತ ಗಾತ್ರದ ಬಜೆಟ್ ಆಗಿರುವುದು ಶ್ಲಾಘನೀಯವಾಗಿದೆ. ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಯೋಜನೆಗಳಿಗೆ ಅನುದಾನ ಬಿಡುಗಡೆ ಮಾಡಿದು ಸ್ವಾಗತಾರ್ಹವಾಗಿದೆ. ಕೃಷಿಹೊಂಡಗಳ ಅಭಿವೃದ್ಧಿ, ಕೃಷಿ ಯಾಂತ್ರಿಕರಣ ಕಾರ್ಯಕ್ರಮದಲ್ಲಿ ರೂ 428 ಕೋಟಿ ವೆಚ್ಚದಲ್ಲಿ 50 ಸಾವಿರ ರೈತರಿಗೆ ಸಹಾಯಧನ ಸೌಲಭ್ಯ ನೀಡಿದ್ದು ಸ್ವಾಗತಾರ್ಹವಾಗಿದೆ. ಹನಿ ಮತ್ತು ನೀರಾವರಿ ಘಟಕ ಅಳವಡಿಕೆಗೆ ಕೃಷಿ ಮತ್ತು ತೋಟಗಾರಿಕೆ ಇಲಾಖೆ ಅಡಿ ಅನುದಾನ ನಿಡಿದುದು, ತೊಗರಿ ಉತ್ಪಾದನೆಗೆ ಸಹಾಯ ಧನ ನಿಡಿದುದು, ರಾಜ್ಯದಲ್ಲಿ 6 ಸಾವೀರ ಕೀರು ಆಹಾರ ಸಂಸ್ಕರಣ ಘಟಕಗಳ ಸ್ಥಾಪನೆ, ಕೃಷಿ ಭಾಗ್ಯ ಯೋಜನೆಯಡಿ 12 ಸಾವೀರ ಕೃಷಿ ಹೊಂಡ ನಿರ್ಮಾಣ, ಕೃಷಿ ಡಿಜಿಟಲ್ ಕೃಷಿ ಸೇವೆಗಳ ಕೇಂದ್ರಗಳ ಸ್ಥಾಪನೆ ರೈತರ ಜೀವನೋಪಾಯ ಸುಧಾರಣೆಗೆ ಸಮಗ್ರ ಮಳೆ ಆಶ್ರಿತ ಕೃಷಿ ನೀತಿ ಜಾರಿ, 95 ಕೋಟಿ ರೂ ವೆಚ್ಚದಲ್ಲಿ ಸಮಗ್ರ ತೋಟಗಾರಿಕಾ ಅಭಿವೃದ್ಧಿ ಯೋಜನೆ ಜಾರಿ ಹಾಗು ತೋಟಗಾರಿಕಾ ಬೆಳೆಗಳ ಕುರಿತು ರೈತರಿಗೆ ಮಾಹಿತಿ ಜ್ಞಾನಕೋಶ ಸ್ಥಾಪನೆ, ತೋಟಗಾರಿಕಾ ಬೆಳೆಗಳಿಗೆ ಹನಿ ನೀರಾವರಿ ಅಡಿ 52 ಸಾವೀರ ಬೆಳೆಗಾರರಿಗೆ ರೂ 426 ಕೋಟಿ ಸಹಾಯ ಧನ ಒದಗಿಸಲು ಕ್ರಮ, ತೋಟಗಾರಿಕಾ ಪ್ರವಾಸೋದ್ಯಮಕ್ಕೆ ಉತ್ತೇಜನ, ಅನುಗ್ರಹ ಯೋಜನೆ ಅಡಿ ಹಸ್ಸು ಎಮ್ಮೆ ಇನ್ನಿತರ ಪರಿಹಾರ ಮೊತ್ತ ಹೆಚ್ಚಳ, ಮಹಿಳೆ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿಗೆ ಹೆಚ್ಚು ಅನುದಾನ ನೀಡಿದ್ದು ಆಶಾದಾಕವಾಗಿದೆ. ರಾಜ್ಯದ ರಸ್ತೆ ಮತ್ತು ಮೂಲ ಸೌಕರ್ಯ ಅಭಿವೃದ್ಧಿಗೆ ಅನುದಾನ ನಿಡಿದುದು, ಕಲ್ಯಾಣ ಕರ್ನಾಟಕ ಭಾಗದಲ್ಲಿ ಖಾಲಿ ಇರುವ 5267 ಶಿಕ್ಷಕರ ಹುದ್ದೆ ಭರ್ತಿಗೆ ಕ್ರಮ, ಸರ್ಕಾರಿ ಮಹೀಳಾ ಕಾಲೇಜು ಇಂಜನಿಯರಿಂಗ್ ಕಾಲೇಜುಗಳು ಪಾಲಿಟೆಕನಿಕ್ ಹಾಗು ಪದವಿ ಕಾಲೇಜುಗಳ ಅಭಿವೃದ್ಧಿಗೆ ಒತ್ತು, ಕಲ್ಯಾಣ ಕರ್ನಾಟಕ ಸಂಪೂರ್ಣ ಆರೋಗ್ಯ ಅಭಿವೃದ್ಧಿ ಯೋಜನೆ ಅಡಿ ಒಟ್ಟು 873 ಕೋಟಿ ಯೋಜನೆಗಳು ಜಾರಿ ಅಲ್ಲದೇ ರಾಜ್ಯ ಸಿಬ್ಬಂಧಿ ಆಡಳಿತ ಸುಧಾರಣೆಗೆ ಹಾಗು ಡಿಬಿಟಿ ಯೋಜೆನೆ ವ್ಯಾಪ್ತಿಗೆ ಒಳಪಡಿಸಿದ್ದು, ಸ್ವಾಗತವಾಗಿದೆ.

ಬೀದರಿ ಕಲೆಗೆ ಪ್ರೋತ್ಸಾಹ ಸಹಾಯ ಧನ ನಿಡಿದುದ್ದು, ಹಾಗು ಗುರುದ್ವಾರ ಮೂಲ ಸೌಕರ್ಯ ಅಭಿವೃದ್ಧಿಗೆ ರೂ 2 ಕೋಟಿ ನಿಡಿದುದ್ದು ಹರ್ಷದಾಯಕವಾಗಿದೆ.

ಆದರೆ ಬೀದರ ಜಿಲ್ಲೆಗೆ ಯಾವುದೇ ವಿಶೇಷ ಯೋಜನೆ ಮತ್ತು ಅನುದಾನ ಘೋಷಣೆ ಯಾಗದೇ ಇರುವುದು ಈಗಿರುವ ಬೀದರಿನ ಜ್ವಲಂತ ಸಮಸ್ಯೆಗಳಾದ ರೈತರ ಜೀವನಾಡಿ ಯಾಗಿರುವ ಹಳ್ಳಿಖೆಡ ಸಕ್ಕರೆ ಕಾರ್ಖಾನೆ (ಬಿಎಸ್‌ಎಸ್ಕೆ) ಬೀದರ ಜಿಲ್ಲಾ ಸಂಖೀರ್ಣ (ಮಿನಿ ವಿಧಾನ ಸೌಧ) ಬಸವಕಲ್ಯಾಣ ಅನುಭವ ಮಂಟಪ, ಬೀದರ ವಿಶ್ವವಿದ್ಯಾಲಯ ಹಾಗು ಕೈಗಾರಿಕೆಗಳ ಸ್ಥಾಪನೆ ಮಾಡುವವರಿಗೆ ಯಾವುದೇ ಉತ್ತೇಜನ ಪ್ರೋತ್ಸಹ ನೀಡದಿರುವುದು ವಿಷಾದನೀಯ ಸಂಗತಿಯಾಗಿದೆ. ಇದು ಜನಸಾಮಾನ್ಯರ ಮುಂಗಡ ಪತ್ರವಾಗದೇ ಕಾಂಗ್ರೇಸ್ ಪಕ್ಷದ ಮುಂಗಡ ಪತ್ರ ಎಂದು ಗೋಚರಿಸುತ್ತದೆ.

## ಸರ್ವತೋಮುಖ ಬಜೆಟ್ ಮಂಡನೆ



ಮಲ್ಲಮ್ಮನುಡಿ ವಾರ್ತೆ ಬೀದರ. ಮಾ. 07: ಕರ್ನಾಟಕ ರಾಜ್ಯದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರು ಇಂದು ಮಂಡಿಸಿದ ಬಜೆಟ್ ರಾಜ್ಯದ ಸರ್ವತೋಮುಖ ಅಭಿವೃದ್ಧಿಯ ಮುನ್ನೋಟದೊಂದಿಗೆ ಎಲ್ಲಾ ವರ್ಗದವರ ಮತ್ತು ಜನಸಾಮಾನ್ಯರ ಅಭಿವೃದ್ಧಿ ಮತ್ತು ಹಿತಾಸಕ್ತಿಯನ್ನು ಆಲೋಚಿಸಿ ಬಜೆಟ್ ಮಂಡನೆ ಮಾಡಲಾಗಿದೆ ಎಂದು ಜಾನಸನ್ ಘೋಡೆ ಕೆಪಿಸಿಸಿ ಕಾರ್ಯದರ್ಶಿ ಕಾರ್ಮಿಕ ವಿಭಾಗ ತಿಳಿಸಿದ್ದಾರೆ

## ಪತ್ರಕರ್ತರಿಗೆ ಮಾಧ್ಯಮ ಸಂಜೀವಿನಿ ಯೋಜನೆ ಘೋಷಿಸಿದ ಸಿಎಂಗೆ ಕೆಯುಡಬ್ಲ್ಯೂಜೆ ಧನ್ಯವಾದ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಮಾ.7:ತುಮಕೂರಿನಲ್ಲಿ ನಡೆದ 39ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ನೀಡಿದ್ದ ಭರವಸೆಯಂತೆ

ಬಜೆಟ್‌ನಲ್ಲಿ ಪತ್ರಕರ್ತರಿಗೆ ಮುಖ್ಯಮಂತ್ರಿ ಮಾಧ್ಯಮ ಸಂಜೀವಿನಿ ಆರೋಗ್ಯ ಯೋಜನೆ ಘೋಷಿಸಿದ್ದಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ (ಕೆಯುಡಬ್ಲ್ಯೂಜೆ) ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಅವರು ಧನ್ಯವಾದ ತಿಳಿಸಿದ್ದಾರೆ. ಪತ್ರಕರ್ತರಿಗೆ ಪ್ರತ್ಯೇಕ ಹೆಲ್ತ್ ಸ್ಕೀಂ ತರಬೇಕು ಎನ್ನುವುದು ಬಹಳ ವರ್ಷಗಳ ಹೋರಾಟ. ಈ ನಿಟ್ಟಿನಲ್ಲಿ ಯೋಜನೆ ಪ್ರಪ್ರಥಮ ಬಾರಿಗೆ ?ಷಣೆಯಾಗಿದೆ. ಇದನ್ನು ಸ್ವಾಗತಿಸೋಣ ಎಂದು ಹೇಳಿದ್ದಾರೆ. ಇದೇ ಸಂದರ್ಭದಲ್ಲಿ ನಿವೃತ್ತ ಪತ್ರಕರ್ತರ ಮಾಸಾಶನವನ್ನು 12 ಸಾವಿರದಿಂದ 15 ಸಾವಿರಕ್ಕೆ ಮತ್ತು ಅವಲಂಬಿತರಿಗೆ 6 ಸಾವಿರದಿಂದ 7500ಕ್ಕೆ ಹೆಚ್ಚಳ ಮಾಡಿರುವುದಕ್ಕೂ ಧನ್ಯವಾದ ತಿಳಿಸಿದ್ದಾರೆ.

ಸಂಘದ ಹಕ್ಕೊತ್ತಾಯಕ್ಕೆ ಸ್ಪಂದಿಸಿ ಈ ನಿಟ್ಟಿನಲ್ಲಿ ಬೇಡಿಕೆ ಈಡೇರಿಸಲು ಸಹಕಾರ ನೀಡಿದ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರಾದ ಕೆ.ವಿ.ಪ್ರಭಾಕರ್ ಅವರಿಗೂ ಧನ್ಯವಾದ ತಿಳಿಸಿದ್ದಾರೆ.

ಯೋಜನೆ ವಿಸ್ತರಿಸಲಿ: ಆರೋಗ್ಯ ಯೋಜನೆಯನ್ನು ಮಾಧ್ಯಮ ಮಾನ್ಯತೆ ಪಡೆದ ಪತ್ರಕರ್ತರಿಗೆ ಮಾತ್ರ ಸೀಮಿತ ಮಾಡದೇ, ಮುಂದೆ ವಾರ್ತಾ ಇಲಾಖೆಯಿಂದ ಮಾನ್ಯತೆ ಪಡೆದಿರುವ ಮಾಧ್ಯಮಗಳಲ್ಲಿ ಕೆಲಸ ಮಾಡುವ ಎಲ್ಲಾ ಪತ್ರಕರ್ತರಿಗೆ ವಿಸ್ತರಿಸಬೇಕು ಎಂದು ಕೆಯುಡಬ್ಲ್ಯೂಜೆ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅವರು ಒತ್ತಾಯಿಸಿದ್ದಾರೆ.

## ಬೀದರ್ ವಿವಿ ಸಿಂಡಿಕೇಟ್‌ಗೆ ಆರು ಸದಸ್ಯರ ನೇಮಕ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 07 : ರಾಜ್ಯ ಸರ್ಕಾರ ಬೀದರ್ ವಿಶ್ವವಿದ್ಯಾಲಯದ ಸಿಂಡಿಕೇಟ್‌ಗೆ ಆರು ಸದಸ್ಯರನ್ನು ನೇಮಕ ಮಾಡಿದೆ.

ಶಿವನಾಥ ಪಾಟೀಲ, ಸಚಿನ್ ಮಲ್ಕಾಪುರ, ವಿಠ್ಠಲದಾಸ್ ಪ್ಯಾಗೆ, ಅರ್ಜುನ ಕನಕ, ಅಬ್ದುಲ್ ಸತ್ತಾರ್ ಚಾಂದಸಾಬ್ ಹಾಗೂ ವೈಷ್ಣವಿ ಆರ್. ಪಾಟೀಲ ಅವರನ್ನು ಮೂರು ವರ್ಷದ ಅವಧಿ ಅಥವಾ ಮುಂದಿನ ಆದೇಶದ ವರೆಗೆ ನೇಮಿಸಿ ಆದೇಶ ಹೊರಡಿಸಿದೆ.

ಸನ್ಮಾನ: ಬೀದರ್ ವಿಶ್ವವಿದ್ಯಾಲಯ ನೂತನ ಸಿಂಡಿಕೇಟ್ ಸದಸ್ಯರಾದ ಶಿವನಾಥ ಪಾಟೀಲ, ವಿಠ್ಠಲದಾಸ್ ಪ್ಯಾಗೆ, ಸಚಿನ್ ಮಲ್ಕಾಪುರ ಹಾಗೂ ಅಬ್ದುಲ್ ಸತ್ತಾರ್ ಚಾಂದ್ ಸಾಬ್ ಅವರನ್ನು ನಗರದ ಕಾಂಗ್ರೆಸ್ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ವಿನೋದಕುಮಾರ ಅಪ್ಪೆ ಅವರ ಕಚೇರಿಯಲ್ಲಿ ಶುಕ್ರವಾರ ಸನ್ಮಾನಿಸಲಾಯಿತು.

ವಿನೋದಕುಮಾರ ಅಪ್ಪೆ ಅವರು ಶಾಲು ಹೊದಿಸಿ, ಮೈಸೂರು ಪೇಟ ತೊಡಿಸಿ ಸನ್ಮಾನಿಸಿದರು.

ಪ್ರಮುಖರಾದ ಅರ್ಜುನರಾವ್ ಹಾವೆ, ವಿನೋದ ಬಂದಗೆ, ಪವನ್ ಮಿಠಾರೆ, ಸೂರ್ಯಕಾಂತ ಸಾಧುರೆ, ರಾಹುಲ್ ಮತ್ತಿತರರು ಇದ್ದರು.

## ಅಂಚೆ ಇಲಾಖೆಯಿಂದ ಮಹಿಳಾ ದಿನ ವಿಶಿಷ್ಟ ಆಚರಣೆ



ಮಲ್ಲಮ್ಮ ನುಡಿ ವಾರ್ತೆ

ಬೀದರ. ಮಾ. 07 : ಇಲ್ಲಿಯ ಅಂಚೆ ಇಲಾಖೆಯು ನಾರಿ ಶಕ್ತಿ ಸಪ್ತಾಹದೊಂದಿಗೆ ಈ ಬಾರಿ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ವಿಶಿಷ್ಟವಾಗಿ ಆಚರಿಸಿತು.

ಸಪ್ತಾಹದ ಅಂಗವಾಗಿ ಹಮ್ಮಿಕೊಂಡಿದ್ದ ವಿವಿಧ ಕಾರ್ಯಕ್ರಮಗಳು ನಗರದ ಅಂಚೆ ಅಧೀಕ್ಷಕರ ಕಚೇರಿಯಲ್ಲಿ ಶುಕ್ರವಾರ ಸಮಾರೋಪಗೊಂಡವು.

ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅಂಚೆ ಅಧೀಕ್ಷಕ ವಿ.ಎಲ್. ಚಿತಕೋಟೆ ಅವರು, ಅಂಚೆ ಇಲಾಖೆಗೆ ಮಹಿಳೆಯರ ಕೊಡುಗೆ ಅಪಾರವಾಗಿದೆ ಎಂದು ಹೇಳಿದರು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ಈ ಸಲ ನಾರಿ ಶಕ್ತಿ ಸಪ್ತಾಹ ಹಮ್ಮಿಕೊಂಡು ಮಹಿಳೆಯರನ್ನು ಗೌರವಿಸಲಾಗಿದೆ. ಸಪ್ತಾಹದಲ್ಲಿ ಮಹಿಳೆಯರಿಗೆ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು. ಮಹಿಳಾ ಅಂಚೆ ಪಾಲಕರು, ಅಂಚೆ ಪೇದೆಗಳು, ಡಾಕ್ ಸೇವಕಿಯರನ್ನು ಸತ್ಕರಿಸಲಾಗಿದೆ ಎಂದು ತಿಳಿಸಿದರು.

ಪ್ರಸ್ತುತ ಬಹುತೇಕ ಕ್ಷೇತ್ರಗಳಲ್ಲಿ ಮಹಿಳೆಯರಿಗೆ ಅವಕಾಶಗಳು ಇವೆ. ಮಹಿಳೆಯರು ಅವುಗಳ ಸದುಪಯೋಗ ಪಡೆದುಕೊಳ್ಳಬೇಕು. ಶ್ರದ್ಧೆಯಿಂದ ಕಾರ್ಯ ನಿರ್ವಹಿಸಿ ಜೀವನದಲ್ಲಿ ಪ್ರಗತಿ ಸಾಧಿಸಬೇಕು ಎಂದು ಪ್ರಧಾನ ಅಂಚೆ ಕಚೇರಿಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಂಗಲಾ ಭಾಗವತ್ ಹೇಳಿದರು.

ಸಫಾಯಿ ಮಿತ್ರ ಮಹಿಳಾ ಕಾರ್ಮಿಕರಾದ ಲಕ್ಷ್ಮಿಬಾಯಿ, ಸವಿತಾ ಹಾಗೂ ಜಗದೇವಿ ಅವರನ್ನು ಸನ್ಮಾನಿಸಲಾಯಿತು.

ಕಂಪ್ಲೆಂಟ್ ಇನಸ್ಪೆಕ್ಟರ್ ಶ್ರೀಧರ ಬಗಾಡೆ, ಶ್ರುತಿ ಸ್ವಾಮಿ ಹಾಗೂ ಅಂಚೆ ಇಲಾಖೆಯ ಸಿಬ್ಬಂದಿ ಹಾಜರಿದ್ದರು.

## ಸಮ ಸಮಾಜ ಕಲ್ಯಾಣ ನಿರ್ಮಾಣದ ಸರ್ವತೋಮುಖ ಅಭಿವೃದ್ಧಿ ಬಜೆಟ್

ಮಲ್ಲಮ್ಮ ನುಡಿ ವಾರ್ತೆ ಬೀದರ. ಮಾ. 07 : ಸನ್ಮಾನ್ಯ ಶ್ರೀ ಸಿದ್ದರಾಮಯ್ಯ ಅವರು ಪ್ರಸ್ತುತ ಪಡಿಸಿದ 16ನೇ ಬಜೆಟ್ ಅವರು ಮಂಡಿಸಿದ ಎಲ್ಲಾ ಪಾಪ್ಯುಲರ್ ಬಜೆಟ್ ಮೀರಿಸಿದ ಸಮತೋಲಿತ ಬಜೆಟ್ ಇದಾಗಿದೆ. ಇದರಲ್ಲಿ ಎಲ್ಲಾ ಇಲಾಖೆಗಳಲ್ಲೂ ಜನ ಕಲ್ಯಾಣ ಕಾರ್ಯಕ್ರಮಗಳು ಅಲ್ಲದೆ ರಾಜ್ಯದ ಅಭಿವೃದ್ಧಿಗಾಗಿ ಪ್ರಸ್ತುತ ಪಡಿಸಿದ ಉತ್ಕೃಷ್ಟವಾದ ಮಂಡನೆ ಆಗಿದೆ. ಟೀಕೆಗಾಗಿ ಗುರಿಯಾದ ಜನಪ್ರಸಿದ್ಧ ಗ್ಯಾರಂಟಿಯನ್ನು ಮುಂದುವರಿಸಿಕೊಂಡು ಹೋಗಿದ್ದ ಅಲ್ಲದೆ ಎಲ್ಲಾ ಇಲಾಖೆಗಳಿಗೆ ಸಮಾಧಾನಕರ ಬಜೆಟ್ ಇದಾಗಿದೆ. ವಿರೋಧ ಪಕ್ಷ ಬಿಜೆಪಿ ಬೆಂಗಳೂರು ಶಾಸಕರ ಬೇಡಿಕೆ ಸೇರಿದಂತೆ ಎಲ್ಲವೂ ಪರಿಗಣಿಸಿ ಬೆಂಗಳೂರು ಅಭಿವೃದ್ಧಿ ಪಡಿಸಿ ವಿಶ್ವಮಟ್ಟದ ನಗರ ಮಾಡಿ ಅಂತಾರಾಷ್ಟ್ರೀಯ ಹೂಡಿಕೆದಾರರಿಗೆ ಸೆಳೆಯುವ ತಂತ್ರಗಾರಿಕೆ ಒಳಗೊಂಡಿದೆ.

ಪತ್ರಕರ್ತರನ್ನು ಪರಿಗಣನೆಗೆ ತೆಗೆದುಕೊಂಡು ಸಮಾಜದಲ್ಲಿ ಕೆಲಸ ಮಾಡುತ್ತಿರುವ ಗ್ರಾಮೀಣ ಭಾಗದ ಸೇವೆಯನ್ನು ಪರಿಗಣಿಸಿ ಅಂಗನವಾಡಿ ಕಾರ್ಯಕರ್ತರು ಮತ್ತು ಸಹಾಯಕರು, ಅತಿಥಿ ಉಪನ್ಯಾಸಕರು, ಕಲಾವಿದರು, ಶಾಲೆಗಳ ಬಿಸಿಯೂಟ ಸಹಾಯಕರಿಗೆ, ಸಹಾಯಧನ ಹೆಚ್ಚು ಮಾಡಿದ್ದಾರೆ. ರೈತರ ಜಮೀನಿಗೆ ಹೋಗುವ ರಸ್ತೆ ಅಭಿವೃದ್ಧಿಗೆ ರೈತ ಪಥ, ಕೃಷಿ ಹೊಂಡ, ಹಾನಿ ನೀರಾವರಿಗೆ



ಸಬ್ಸಿಡಿ, ತೋಟಗಾರಿಕೆ ಪ್ರೋತ್ಸಾಹ, ನೀರಾವರಿಗೆ ಹೆಚ್ಚಿನ ಅನುದಾನ, ಸಿರಿಧಾನ್ಯ ಅಭಿವೃದ್ಧಿ, ತೊಗರಿ ಬೆಳೆ ಬೆಂಬಲ ಬೆಲೆ, ರೈತರ ಯಾಂತ್ರಿಕ ಪ್ರಗತಿಗೆ ಸಬ್ಸಿಡಿ, ಹೀಗೆ ರೈತರ ಸಮಸ್ಯ ಬಗೆಹರಿಸುವ ನಿಟ್ಟಿನಲ್ಲಿ ಬಜೆಟ್. ರೈತರ ಜಾನುವಾರು ಮತ್ತು ಕುರಿಗಳ ಆಕಸ್ಮಿಕ ಸಾವಿನ ಪರಿಹಾರ ಗರಿಷ್ಠ ಹೆಚ್ಚಳ.

ಕಲ್ಯಾಣ ಕರ್ನಾಟಕ: ಪಥ ರಸ್ತೆಗೆ ಎಲ್ಲಾ ಶಾಸಕರ ಕ್ಷೇತ್ರದಲ್ಲೂ ರಸ್ತೆ ಅಭಿವೃದ್ಧಿಗೆ ಒಂದು ಸಾವಿರ ಕೋಟಿ, ಕಕ ಭಾಗಕ್ಕೆ 500 ಹೊಸ ಶಾಲೆ, ಕಕ ಭಾಗದಲ್ಲಿ 5 ಸಾವಿರ ಶಿಕ್ಷಕರ ನೇಮಕಾತಿ, ಕಲ್ಯಾಣ ಕರ್ನಾಟಕ ಯೋಜನೆಗಳಿಗೆ 873 ಕೋಟಿ, ಹೀಗೆ ಹಲವಾರು ಕಾರ್ಯಕ್ರಮ ಹಾಕಿದ್ದಾರೆ. ಅಕ್ಷರ ಆವಿಷ್ಕಾರ ಯೋಜನೆ 50 ಶಾಲೆಗಳನ್ನು ಸುಸಜ್ಜಿತ ಕೆಪಿಎಸ್ ಶಾಲೆ ಉನ್ನತೀಕರಣಗೊಳಿಸಲು ಕ್ರಮ, ಮಹಿಳೆಯರಿಗೆ: ಮಹಿಳೆಯರ ಕಂಟಕದಾಯಕ ಗರ್ಭ ಕಂಟ ಕ್ಯಾನ್ಸರ್ ಉಚಿತ ಲಸಿಕೆ, ಬಾಣತಿಯರ ಮಕ್ಕಳ ಸಾವಿನ ಸಂಖ್ಯೆ ನಿಯಂತ್ರಣಕ್ಕೆ ಅನುದಾನ, ಬಾಣತಿಯರಿಗೆ ಪೌಷ್ಟಿಕ ಆಹಾರ ಸೇರಿ ಮಹಿಳೆಯರ ಆರೋಗ್ಯ ಕಾಳಜಿ ವಹಿಸಿದೆ. ಬೀದರ ಜಿಲ್ಲೆಯ ಬಸವಕಲ್ಯಾಣದಲ್ಲಿ ನಿರ್ಮಾಣ ಆಗುತ್ತಿರುವ ಅನುಭವ ಮಂಟಪ ಕಟ್ಟಡ ವರ್ಷದಲ್ಲಿ ಪೂರ್ಣಗೊಳಿಸುವ ಗುರಿ. ಬಸವ ಆಧ್ಯಾತ್ಮಿಕ ಮತ್ತು ವಚನ ಅಧ್ಯಯನ ಕೇಂದ್ರ ಬೆಂಗಳೂರಲ್ಲಿ ಸ್ಥಾಪಿಸಲು ಕ್ರಮ. ಬೀದರ ಜಿಲ್ಲೆಯಲ್ಲಿ ಬಂಜಾರ ಕಸೂತಿ ಕಲೆ ತರಭೇತಿ ಕೇಂದ್ರ. ಬೀದರ ಸರಕಾರಿ ಆಸ್ಪತ್ರೆಯಲ್ಲಿ ಕ್ಯಾನ್ಸರ್ ಪತ್ತೆ ವಿಭಾಗ ಪ್ರಾರಂಭ ಮಾಡಲು ಕ್ರಮಕೈಗೊಂಡಿದ್ದು ಉತ್ತಮ ಕ್ರಮ ಎಂದು ಶ್ರೀಕಾಂತ ಸ್ವಾಮಿ, ಅಧ್ಯಕ್ಷರು, ಜಿಲ್ಲಾ ಸಮಗ್ರ ಅಭಿವೃದ್ಧಿ ಹೋರಾಟ ಸಮಿತಿ ಬೀದರ ತಿಳಿಸಿದ್ದಾರೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.

ವಾರ್ಷಿಕ ಸ್ನೇಹ ಸಮ್ಮೇಳನದಲ್ಲಿ ಸಿಆರ್‌ಪಿ ವಿಜಾಪುರ ಸಲಹೆ

## ಮಕ್ಕಳು ಮೊಬೈಲ್ ದಾಸರಾಗದಂತೆ ನೋಡಿಕೊಳ್ಳಿ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಇಂದಿನ ತಂತ್ರಜ್ಞಾನದ ಯುಗದಲ್ಲಿ ಮೊಬೈಲ್‌ನ ಅಗತ್ಯ ಬಹಳಷ್ಟಿದೆ ಆದರೆ ಅದರ ಸರಿಯಾದ ಸದ್ಬಳಕೆ ಆಗುತ್ತಿಲ್ಲ, ಅತಿಯಾದ ಮೊಬೈಲ್ ಗೀಳಿನಿಂದಾಗಿ ಮಕ್ಕಳು ದೈಹಿಕ ಹಾಗೂ ಮಾನಸಿಕವಾಗಿ ಪ್ರಭಾವಿತರಾಗುತ್ತಿದ್ದಾರೆ ಅವರು ಮೊಬೈಲ್ ದಾಸರಾಗದಂತೆ ನೋಡಿಕೊಳ್ಳುವುದು ಪಾಲಕರ ಜವಾಬ್ದಾರಿಯಾಗಿದೆ ಎಂದು ತಾಳಿಕೋಟಿ ಸಿಆರ್‌ಪಿ ರಾಜು ವಿಜಾಪುರ ಸಲಹೆ ನೀಡಿದರು.

ತಾಳಿಕೋಟಿ ಪಟ್ಟಣದ ಹಡಗಿನಾಳ ರಸ್ತೆಯಲ್ಲಿರುವ ಶ್ರೀ ಸುಗೂರೇಶ್ವರ ವಿದ್ಯಾ ವರ್ಧಕ ಸಂಘದ ಸರಸ್ವತಿ ವಿದ್ಯಾ ಮಂದಿರ ಹಿರಿಯ ಪ್ರಾಥಮಿಕ ಶಾಲೆಯ 2024-25 ಸಾಲಿನ ಶಾಲಾ ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ಸಾಂಸ್ಕೃತಿಕ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಕೆಲವೇ ವರ್ಷಗಳ ಹಿಂದೆ ಒಂದು ಚಿಕ್ಕ ಬಾಡಿಗೆ ಕಟ್ಟಡದಲ್ಲಿ ಆರಂಭವಾದ ಈ ಶಾಲೆ ಇಂದು ಹೆಮ್ಮರವಾಗಿ ಬೆಳೆದ ನಿಂತಿದೆ ಇದಕ್ಕೆ ಸಂಸ್ಥೆಯ ಅಧ್ಯಕ್ಷರು, ಆಡಳಿತ ಮಂಡಳಿ ಸದಸ್ಯರು, ಇಲ್ಲಿ ಸೇವೆ ಸಲ್ಲಿಸುತ್ತಿರುವ ಮುಖ್ಯ ಗುರುಗಳು ಹಾಗೂ ಶಿಕ್ಷಕ ವರ್ಗದವರ ತ್ಯಾಗ ಮತ್ತು ಶ್ರಮ ಬಹಳಷ್ಟಿದೆ. ಪಟ್ಟಣದಲ್ಲಿಯೇ ಅತಿ ಕಡಿಮೆ ಶುಲ್ಕ ಪಡೆದು ಗುಣಮಟ್ಟದ ಶಿಕ್ಷಣ ನೀಡುವ ಸಂಸ್ಥೆ ಇದಾಗಿದೆ ಎಂದರು. ಸ.ಪ್ರಾ.ಶಿ.ಸ. ಸಹಕಾರಿ ಸಂಘದ ಅಧ್ಯಕ್ಷ ಸುರೇಶ್ ವಾಲಿಕರ ಹಾಗೂ ನಿವೃತ್ತ ಶಿಕ್ಷಕ ಬಸವರಾಜ್ ಗೊರಜಿ ಮಾತನಾಡಿ ಮಕ್ಕಳಿಗೆ ಕೇವಲ ಅಂಕ ಗಳಿಕೆ ವಿಧಾನ ಕಲಿಸದೆ ಅವರಿಗೆ ಉತ್ತಮ ಮಾನವೀಯ ಮೌಲ್ಯಗಳನ್ನೂ ಕಲಿಸಬೇಕಾದ ಅಗತ್ಯ ಇದೆ ಎಂದು ಅಭಿಪ್ರಾಯಪಟ್ಟರು. ಸಂಸ್ಥೆಯ ಅಧ್ಯಕ್ಷ ಮುರುಗೇಶ ಅ. ಕಡಕೋಳ ಅಧ್ಯಕ್ಷತೆ ವಹಿಸಿದ್ದರು. ಇದೇ ಸಂದರ್ಭದಲ್ಲಿ ಶಾಲೆಯ ಆದರ್ಶ ವಿದ್ಯಾರ್ಥಿಗಳಿಗೆ ಪದಕಗಳನ್ನು ನೀಡಿ ಗೌರವಿಸಲಾಯಿತು. ಹಳೆಯ ವಿದ್ಯಾರ್ಥಿಗಳ ಸಂಘದ ವತಿಯಿಂದ ಸಂಸ್ಥೆಯ ಅಧ್ಯಕ್ಷ ಮುರುಗೇಶ ಕಡಕೋಳ ಹಾಗೂ ಕಾರ್ಯದರ್ಶಿ ಶ್ರೀಮತಿ ಪಲ್ಲವಿ ಎಂ.ಕಡಕೋಳ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಮಾಧ್ಯಮ ಕ್ಷೇತ್ರದಲ್ಲಿ ಅನುಪಮ ಸೇವೆ ಸಲ್ಲಿಸುತ್ತಿರುವ ಪತ್ರಕರ್ತರಾದ ಬಸವರಾಜ ಕಟ್ಟಿಮನಿ, ಅಬ್ದುಲಗನಿ ಮಕಾನದಾರ, ಸಂಜಯಸಿಂಗ್ ರಜಪೂತ ಹಾಗೂ ನಜೀರ್ ಅಹ್ಮದ್ ಚೋರಗಸ್ತಿ ಇವರನ್ನು ಸನ್ಮಾನಿಸಿ ಗೌರವಿಸಲಾಯಿತು. ಈ ಸಮಯದಲ್ಲಿ ಪುರಸಭೆ ಅಧ್ಯಕ್ಷೆ ಜುಬೇದಾ ಹುಸೇನಬಾಷಾ ಜಮಾದಾರ, ಪಿಕೆಪಿಎಸ್ ವ್ಯವಸ್ಥಾಪಕ ಶಂಕರಗೌಡ ಪಾಟೀಲ, ನಿರ್ದೇಶಕ ಶರಣಪ್ಪ ಇಲಕಲ್ಲ, ಮೂಕಿಹಾಳ ಗ್ರಾಪಂ ಸದಸ್ಯ ಜಾವೇದ್ ಪಟೇಲ, ಸಂಸ್ಥೆ ಉಪಾಧ್ಯಕ್ಷ ರಮೇಶ ಮದ್ದರಕಿ, ಮುಖ್ಯ ಭಾಗ್ಯವಂತಿ ದೇವಸ್ಥಾನ ಅಧ್ಯಕ್ಷ ಶಂಕರ ಸೋನೂನೆ, ಈರಣ್ಣ ಕಲಬುರ್ಗಿ, ಎನ್.ಎಚ್.ಮದರಿ, ಮುಖ್ಯ ಶಿಕ್ಷಕ ಬಿ.ವಾಯ್. ಚವನಭಾವಿ, ವಿನಾಯಕ ಶಿಕ್ಷಣ ಸಂಸ್ಥೆ ಅಧ್ಯಕ್ಷ ಸಂಗಮೇಶ ದೇಸಾಯಿ, ಭೋಗೇಶ್ವರ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಸಂಗನಗೌಡ ಹಣಮರೆಡ್ಡಿ, ಎಂ.ಬಿ.ಪೂಜಾರಿ, ಹಳೆಯ ವಿದ್ಯಾರ್ಥಿಗಳ ಸಂಘದ ಸದಸ್ಯರಾದ ಆಬೀದ ಲಾಹೋರಿ, ಶಾಹೀದ್ ಶಿವಣಗಿ, ಮಹಿಬೂಬ ನದಾಫ, ಶಿಕ್ಷಕ ವರ್ಗ ಹಾಗೂ ಪಾಲಕರು ಇದ್ದರು. ವೇದಿಕೆ ಕಾರ್ಯಕ್ರಮ ನಂತರ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಶಿಕ್ಷಕೀಯರಾದ ಸ್ನೇಹಾ, ರೇಣುಕಾ ಪ್ರಾರ್ಥಿಸಿದರು. ಉಪಾಧ್ಯಕ್ಷ ರಮೇಶ ಮದ್ದರಕಿ ಸ್ವಾಗತಿಸಿದರು. ಮುಖ್ಯ ಶಿಕ್ಷಕ ಬಿ.ವಾಯ್. ಚವನಭಾವಿ ನಿರೂಪಿಸಿ ವಂದಿಸಿದರು.

## ಚಿಟಗುಪ್ಪ ಬಸ್ ನಿಲ್ದಾಣಕ್ಕೆ ಹೆಚ್ಚಿನ ಬಸ್ಸಿನ ಸೌಲಭ್ಯ ಒದಗಿಸಲು ಕನ್ನಡ ಸೇನೆ ಆಗ್ರಹ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ಬಸ್ ನಿಲ್ದಾಣದಿಂದ ಬೆಳಿಗ್ಗೆ 7ರಿಂದ ರಾತ್ರಿ 9 ಘಂ-ಟೆಯ ವರೆಗೆ ಬಸ್ಸಿನ ಸೌಲಭ್ಯ ಒದಗಿಸಬೇಕೆಂದು ಕನ್ನಡ ಸೇನೆ ಕರ್ನಾಟಕ ಸಂಘಟನೆಯ ಜಿಲ್ಲಾಧ್ಯಕ್ಷ ಸುಭಾಷ ಕೆನಡೆ, ತಾಲೂಕಾಧ್ಯಕ್ಷ ಪವನ್ ಪೂಜಾರಿ ಹುಮನಾಬಾದ ಕೆ.ಎಸ್.ಆರ್.ಟಿ.ಸಿ ಘಟಕದ ವ್ಯವಸ್ಥಾಪಕರಿಗೆ ಬರೆದ ಮನವಿ ಪತ್ರದಲ್ಲಿ ಆಗ್ರಹಿಸಿದ್ದಾರೆ. ಚಿಟಗುಪ್ಪ ಪಟ್ಟಣಕ್ಕೆ ಮುಂಜಾನೆ ಸರಿಯಾದ ಸಮಯಕ್ಕೆ ಬಚ್ಚಿನ ಸೌಕರ್ಯ ಇಲ್ಲದೆ ಇರುವುದರಿಂದ ಸಾರ್ವಜನಿಕರಿಗೆ, ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ, ತೀವ್ರ ತೊಂದರೆ ಆಗುತ್ತಿದೆ. ಈ ಸಂಬಂಧ ಹಲವಾರು ಬಾರಿ ಮನವಿ ಪತ್ರ ಸಲ್ಲಿಸುವವರು ಕೂಡ ಎನ್ನುವರಿಗೆ ಈ ಸಮಸ್ಯೆ ಈಡೇರಿಸಲಿಲ್ಲ ಆದರಿಂದ ಚಿಟಗುಪ್ಪ ಪಟ್ಟಣಕ್ಕೆ ಬೆಳಿಗ್ಗೆ 7ರಿಂದ 9 ಗಂಟೆವರೆಗೆ ಸಾಯಂಕಾಲ 5:00ಯಿಂದ 11 ಘಂಟೆಯ ವರೆಗೆ ಹೆಚ್ಚಿನ ಬಸ್ಸಿನ ಸೌಲಭ್ಯ ಒದಗಿಸಿಕೊಡಬೇಕು ಇಲ್ಲದಿದ್ದರೆ ಮುಂದಿನ ದಿನದಲ್ಲಿ ಸುಡುಗುಪ್ಪ ಬಸ್ ನಿಲ್ದಾಣ ಬಂದ್ ಮಾಡುವ ಮೂಲಕ ಉಗ್ರ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಈ ಸಂದರ್ಭದಲ್ಲಿ ನಾಗರಾಜ ಹುಡಗಿ, ತಿಪ್ಪಣ್ಣರೆಡ್ಡಿ, ಕಲ್ಲಪ್ಪ ಮನ್ನಾಖೇಳಿ, ಸೋಮನಾಥ ಮಡಿವಾಳ, ವೀರಯ್ಯಾ ಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ಕೆಂಭಾವಿಯ ಹೊಸ ಬಸ್ ಸ್ಟ್ಯಾಂಡ್‌ನಲ್ಲಿ ರಾಹಿಮಾನ್ ಪಟೇಲ್ ರವರಿಂದ ಇಂದಿರಾ ಕ್ಯಾಂಟೀನ ಭೂಮಿ ಪೂಜೆ



ಮಲ್ಲಮ್ಮ ನುಡಿ ವಾರ್ತೆ

ಕೆಂಭಾವಿ: ಹೊಸ ಬಸ್ ಸ್ಟ್ಯಾಂಡ್‌ನಲ್ಲಿ ಇಂದಿರಾ ಕ್ಯಾಂಟೀನ ಭೂಮಿ ಪೂಜೆ ಇಂದು ಪುರಸಭೆ ಅಧ್ಯಕ್ಷ ರಾಹಿಮಾನ್ ಪಟೇಲ್ ಅವರು ನೆರವೇರಿಸಿದರು. ಈ ಸಂದರ್ಭದಲ್ಲಿ ಅವರು ಸಾರ್ವಜನಿಕರಿಗೆ ಕ್ಯಾಂಟೀನ ಉಪಯೋಗ ಮತ್ತು ಪ್ರಯೋಜನಗಳನ್ನು ವಿವರಿಸಿ ಮಾತಾಡಿದರು.

"ಈ ಹೊಸ ಕ್ಯಾಂಟೀನ್ ಪ್ರಾರಂಭದಿಂದ ಪ್ರಯಾಣಿಕರು ಹಿತಕರ ಮತ್ತು ಅನುಕೂಲಕರ ಆಹಾರ ಸೇವನೆ ಪಡೆಯಲು ಸಾಧ್ಯವಾಗಲಿದೆ. ಇದು ಬಸ್ ನಿಲ್ದಾಣದ ಬಳಿಯ ಪ್ರಯಾಣಿಕರಿಗೆ ನಿರಂತರವಾಗಿ ಕೆಂಬಾವಿ ಪಟ್ಟಣದ ಸಾರ್ವಜನಿಕರಿಗೆ ಸೇವೆ ನೀಡಲು ಹತ್ತಿರವಿರುವ ಅತ್ಯುತ್ತಮ ಆಯ್ಕೆ ಆಗಲಿದೆ. ಸಾರ್ವಜನಿಕರಿಗೆ ಶುದ್ಧ ಮತ್ತು ಗುಣಮಟ್ಟದ ಆಹಾರ ಸೌಲಭ್ಯವನ್ನು ನೀಡುವುದೇ ನಮ್ಮ ಉದ್ದೇಶವಾಗಿದೆ," ಎಂದರು ಪಟೇಲ್.

ಇಂದಿರಾ ಕ್ಯಾಂಟೀನನಲ್ಲಿ ವಿವಿಧ ರುಚಿಕರ ಹಾಗೂ ಆರೋಗ್ಯಕರ ಆಹಾರಪದಾರ್ಥಗಳು ಲಭ್ಯವಿರುತ್ತವೆ, ಸೇವೆ ನೀಡುವ ವ್ಯವಸ್ಥೆ ಇರಲಿದೆ. ಇದ-ರಿಂದ ಪ್ರಯಾಣಿಕರಿಗೆ ಯಾವುದೇ ಸಮಯದಲ್ಲಿ ಆಹಾರ ಸೇವನೆ ಸೌಲಭ್ಯವಿರುತ್ತದೆ.

"ನಾವು ಈ ಯೋಜನೆಯನ್ನು ಪ್ರಾರಂಭಿಸಿದ್ದು, ಕೆಂಭಾವಿಯಲ್ಲಿ ಬಸ್ ಸ್ಟ್ಯಾಂಡ್ ನ ಮೂಲಕ ಸಾಗುವ ಕೆಂಭಾವಿ ಸಾರ್ವಜನಿಕರಿಗೆ ಪ್ರಯಾಣಿಕರಿಗೆ ಉತ್ತಮ ಅನುಭವವನ್ನು ನೀಡಲು. ಈ ಉಪಕ್ರಮವು ನಮ್ಮ ಪ್ರದೇಶದಲ್ಲಿ ಅಭಿವೃದ್ಧಿ ಮತ್ತು ಸಮುದಾಯ ಸೇವೆಗೆ ಸಾರ್ವಜನಿಕ ಪರ ಯಾವಾಗಲೂ ಇರುತ್ತೇನೆ ಪಟೇಲ್ ಅವರು ಹರ್ಷ ವ್ಯಕ್ತಪಡಿಸಿದರು.

# ಇಂದು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

ಮಲ್ಲಮ್ಮ ನುಡಿ ವಾರ್ತೆ

ಸಮಾಜದ ಅಭಿವೃದ್ಧಿಗೆ ಪುರುಷರೊಂದಿಗೆ ಮಹಿಳೆಯರು ಸಹ ಸಮಾನವಾಗಿ ಕೊಡುಗೆ ನೀಡುತ್ತಿದ್ದಾರೆ. ಆದರೂ ಅನೇಕ ದೇಶಗಳಲ್ಲಿ, ಮಹಿಳೆಯರಿಗೆ ಪುರುಷರಿಗೆ ಸಮಾನವಾದ ಗೌರವ ಮತ್ತು ಅವಕಾಶಗಳು ಸಿಗುವುದಿಲ್ಲ. ಕೆಲವು ದೇಶಗಳಲ್ಲಿ, ಮಹಿಳೆಯರು ಕುಟುಂಬದ ನಾಲ್ಕು ಗೋಡೆಗಳ ನಡುವೆ ನಲುಗುತ್ತಿದ್ದಾರೆ. ಕ್ರೀಡೆ, ರಾಜಕೀಯ, ರಕ್ಷಣಾ ಸಚಿವಾಲಯ ಮತ್ತು ಮಿಲಿಟರಿ ಕ್ಷೇತ್ರಗಳಲ್ಲಿ ಅನೇಕ ದೇಶಗಳು ಮಹಿಳೆಯರಿಗೆ ಬೆಂಬಲ ನೀಡುತ್ತಿವೆ. ಪ್ರತಿ ಕ್ಷೇತ್ರದಲ್ಲೂ ಮಹಿಳೆಯರ ಭಾಗವಹಿಸುವಿಕೆಯನ್ನು ಉತ್ತೇಜಿಸಲು, ಮಹಿಳೆಯರಿಗೆ ಅವರ ಹಕ್ಕುಗಳ ಬಗ್ಗೆ ಶಿಕ್ಷಣ ನೀಡಲು ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಪ್ರತಿ ವರ್ಷ ಆಚರಿಸಲಾಗುತ್ತದೆ.

ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಮಾರ್ಚ್ 8 ರಂದು ಪ್ರಪಂಚದಾದ್ಯಂತ ಆಚರಿಸಲಾಗುತ್ತದೆ. ಈ ದಿನವು




ಮಹಿಳೆಯರ ಸಾಧನೆಗಳನ್ನು ಮತ್ತು ಸಾಮಾನ್ಯವಾಗಿ ಅವರ ಅಸ್ತಿತ್ವವನ್ನು ಸ್ಮರಿಸಲಾಗುತ್ತದೆ.

ಅಂತರರಾಷ್ಟ್ರೀಯ ಮಹಿಳಾ ದಿನ ಮಹಿಳೆಯರ ಸಾಧನೆಗಳನ್ನು ನೆನೆಯುವ ದಿನ. ತನಗಿರುವ ಹಲವಾರು ಸಮಸ್ಯೆಗಳನ್ನು ಮೆಟ್ಟಿ ನಿಂತು ಮಹಿಳೆ ಬಹುತೇಕ ರಂಗದಲ್ಲಿ ತನ್ನನ್ನು ತಾನು ಗುರುತಿಸಿಕೊಂಡಿದ್ದಾಳೆ. ದೌರ್ಜನ್ಯ, ದಬ್ಬಾಳಿಕೆ, ಹಿಂಸೆಯಂತಹ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಿ ಹಲವಾರು ಕ್ಷೇತ್ರಗಳಲ್ಲಿ ಪುರುಷರಷ್ಟೇ ಸರಿಸಮಾನವಾಗಿ ಮುಂದಿದ್ದಾಳೆ. ಕ್ರೀಡೆಯಲ್ಲಿ, ಸೈನ್ಯದಲ್ಲಿ, ಬಾಹ್ಯಾಕಾಶದಲ್ಲಿ, ಯುದ್ಧ ವಿಮಾನಗಳಲ್ಲಿ ಮಹಿಳೆ ಮಹತ್ತರ ಸಾಧನೆ ಮಾಡಿದ್ದಾಳೆ. ಯಾವ ಪುರುಷರಿಗೂ ತಾನು ಕಡಿಮೆ ಇಲ್ಲ ಎಂದು ತೋರಿಸಿಕೊಟ್ಟಿದ್ದಾಳೆ.

ನೇರಳೆಬಣ್ಣವು ಪ್ರಪಂಚದಾದ್ಯಂತ ಮಹಿಳಾ ದಿನವನ್ನು ಸಂಕೇತಿಸಲು ಬಳಸಲ್ಪಡುತ್ತದೆ.

1908ರಲ್ಲಿ ಅಮೆರಿಕದಲ್ಲಿ ಕಾರ್ಮಿಕ ಚಳವಳಿ ನಡೆದಿತ್ತು ಸುಮಾರು 15,000 ಮಹಿಳೆಯರು ನ್ಯೂಯಾ-ರ್ಕ್ ಬೀದಿಗಳಲ್ಲಿ ಮೆರವಣಿಗೆ ನಡೆಸಿದ್ದರು ಮತ್ತು ತಮ್ಮ ಹಕ್ಕುಗಳಿಗಾಗಿ ಹೋರಾಡಿದರು. ಮಹಿಳೆಯರಿಗೂ ಮತದಾನದ ಹಕ್ಕನ್ನು ನೀಡಬೇಕೆಂದು ಬೇಡಿಕೆಯಿಟ್ಟಿದ್ದರು ವಿಶ್ವಸಂಸ್ಥೆಯ ಪ್ರಕಾರ 2022ರಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನದ ಥೀಮ್ "ಸುಸ್ಥಿರ ನಾಳೆಗಾಗಿ ಇಂದು ಲಿಂಗ ಸಮಾನತೆ. 2024ರ ಸಾಧನೆ ಗೈದ ಮಹಿಳೆಯರು :ಅವನಿ ಚತುರ್ವೇದಿ: ಫೈಟ್ ಲೆಫ್ಟಿನೆಂಟ್

ಸ್ನೇಹಾ ದುಬೆ ಕೃತಿ ಕಾರಂತ್: ಪ್ರಸ್ತುತ ಬೆಂಗಳೂರಿನ ವನ್ಯಜೀವಿ ಅಧ್ಯಯನ ಕೇಂದ್ರದಲ್ಲಿ ಮುಖ್ಯ ಸಂರಕ್ಷಣಾ ವಿಜ್ಞಾನಿ, ತುಳಸಿ ಗೌಡ: ಹಲವಾರು ದಶಕಗಳಿಂದ ಪರಿಸರ ಸಂರಕ್ಷಣೆಗಾಗಿ, ವಾಣಿ ಕೋಲಾ: ಟೆಸ್ಸಿ ಥಾಮಸ್: ವಿದ್ಯಾವತಿ ನಾಯಕ್ ಆಖಆಔ ನಲ್ಲಿ ವಿಜ್ಞಾನಿ ಫಲ್ಗುಣಿ ನಾಯರ್: ವ್ಯಾಪಾರ ಮಹಿಳೆಯರಲ್ಲಿ ಒಬ್ಬರಾದರು. ಅರುಣಿಮಾ ಸಿನ್ಹಾ: ಪ್ರಬಲ ಮೌಂಟ್ ಎವರೆಸ್ಟ್ ಅನ್ನು ಏರಿದ ಮೊದಲ ಅಂಗವಿಕಲ ಮಹಿಳೆ ಭಾರತದವರು ಮತ್ತು ಅವರ ಹೆಸರು ಅರುಣಿಮಾ ಸಿನ್ಹಾ. ನಾನು ಎಲ್ಲೋ ಕೇಳಿದ ಸ್ಫೂರ್ತಿ ತುಂಬುವ ಮಾತುಗಳು : ಮಗಳೆ ನೀ ನು ಬಳುಕುವ ಬಳ್ಳಿ ಯಲ್ಲಾ

ಬೆಡಗಿನ ಬಿನ್ನಾಣಗಿತ್ತಿಯಲ್ಲಾ;

ನೀಕೋಮಲ ಸುಮಲತೆಯಲ್ಲಾ;

ಹಂಸ ಸುಕೋಮಲ ದಲ್ಲಿ ಮಲಗಿ

ವಿರಹ ವ್ಯಥೆಯಲಿ ಸೊರಗಿ;

ಚಂದನ ದಂತೆ ಕರಗಿ;

ಮರೆಯಾದವಳ ಅಲ್ಲ

ಯಾರೇ ಕಟ್ಟಿದರು,,ಕುಟ್ಟಿದರು ,ಮೆಟ್ಟಿ ದ ರೂ ಚುಚ್ಚಿದರೂ, ಚಂಡಾಡಿದರೂ ಸೋಲುವವ ಅವಳಲ್ಲ ಎದ್ದು ನಿಲ್ಲಲು ಪುರುಷ ಭುಜ ವೇ ಬೇಕೆಂದು ಏನಿಲ್ಲ

ನೀ ಕಾಳಿ, ನೀ ದುರ್ಗಾ, ನೀ ಬೆಳಕು ಹೊರತು ಕತ್ತಲಲ್ಲ. ಕುಗ್ಗಿ ದ, ಜಗ್ಗದೇ ಎದ್ದೇಲೂ ಕಷ್ಟ ಬಂದರೆ ಬರಲಿ, ಬಿರುಗಾಳಿ ಬೀಸಲಿ ಧೈರ್ಯ ಬಿಡಬೇಡ, ಸೋತು ಸೊರಗ ಬೇಡ ಆತ್ಮ ಬಲ ಬೆಳೆಸಿ ಕೊ

ಬದುಕಿ ಬಾಳುವ ಛಲ....



ಲೇಖಕಿ
ಶ್ರೀಮತಿ ಧನಲಕ್ಷ್ಮಿ ಪಾಟೀಲ್

## ಬಸವಕಲ್ಯಾಣ ಆಸ್ಪತ್ರೆ ಮೇಲ್ದರ್ಜೆ ವಿಜಯಸಿಂಗ್ ಹರ್ಷ

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ : – ಫೆ 7 ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಡಿಸಿಎಂ ಡಿ.ಕೆ ಶಿವಕುಮಾರ ಅವರಿಗೆ ಬಸವಕಲ್ಯಾಣ ಕ್ಷೇತ್ರದಲ್ಲಿ ಕೆಲವು ಬೇಡಿಕೆಗಳನ್ನು ಇಟ್ಟಿದೆವು. ನಮ್ಮ ಕ್ಷೇತ್ರದ ಬೇಡಿಕೆಗಳು ಈಡೇರಿದ್ದಕ್ಕೆ ತುಂಬಾ ಹರ್ಷವಾಗಿದೆ ಎಂದು ಮಾಜಿ ವಿಧಾನ ಪರಿಷತ್ ಸದಸ್ಯ ವಿಜಯಸಿಂಗ್ ಬಜೆಟ್ ಮಂಡನೆ ಬಗ್ಗೆ ಸಂತಸ ವ್ಯಕ್ತಪಡಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿದ ಅವರು, ಕಲ್ಯಾಣ ಕರ್ನಾಟಕ ಸಂಪೂರ್ಣ ಆರೋಗ್ಯ ಅಭಿವೃದ್ಧಿ ಯೋಜನೆಯಡಿ ತಾಲೂಕು ಆಸ್ಪತ್ರೆಯನ್ನು ಜಿಲ್ಲಾ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.



ಅಲ್ಲದೇ ತಾಲೂಕಿನ ಕೊಂಗಳಿ ಕೆರೆ ತುಂಬಿಸುವ ಯೋಜನೆ ಘೋಷಣೆ ಮಾಡಲಾಗಿದೆ. ಬೀದರ ನಗರಸಭೆಯನ್ನು ಮಹಾನಗರ ಪಾಲಿಕೆಯನ್ನಾಗಿ ಮೇಲ್ದರ್ಜೆಗೇರಿಸಿದ್ದಾರೆ. ನೂತನ ಹುಲಸೂರು ತಾಲೂಕಿನಲ್ಲಿ ಪ್ರಜಾಸೌಧ ನಿರ್ಮಾಣಕ್ಕಾಗಿ ಅನುಮೋದನೆ ನೀಡಿದ್ದಾರೆ. ಇಲ್ಲಿನ ಅನುಭವ ಮಂಟಪ ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಈಗಾಗಲೇ ಭರವಸೆ ನೀಡಿದ್ದಾರೆ.

ಕ.ಕ ಭಾಗದಲ್ಲಿ 24 ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳು, 7 ನಗರ ಆರೋಗ್ಯ ಕೇಂದ್ರಗಳು, ಪ್ರಾಥಮಿಕ ಆರೋಗ್ಯ ಕೇಂದ್ರದಿಂದ 10 ಮೇಲ್ದರ್ಜೆಗೇರಿಸಲಾಗುತ್ತಿದೆ. ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿರುವ ಬಜೆಟ್ ಸಮಾಜಮುಖಿ ಬಜೆಟ್ ಆಗಿದೆ. ಎಲ್ಲ ವರ್ಗಗಳು, ಸಮುದಾಯಕ್ಕೂ ಅನುದಾನ ಕೊಟ್ಟಿದ್ದಾರೆ. ಕಲ್ಯಾಣ ಕರ್ನಾಟಕ ಭಾಗಕ್ಕೆ ಒಳ್ಳೆಯ ಯೋಜನೆ ಅನೇಕ ಯೋಜನೆ ಘೋಷಣೆ ಮಾಡಿದ್ದಾರೆ. ಗ್ಯಾರಂಟಿ ಯೋಜನೆಗಳು ಇದ್ದರೂ ಇಷ್ಟು ದೊಡ್ಡ ಮೊತ್ತದ ಬಜೆಟ್ ಕೊಟ್ಟಿದ್ದಾರೆ. ರಾಜ್ಯಕ್ಕೆ ಬರೋಬ್ಬರಿ 4.9 ಲಕ್ಷ ಕೋಟಿ ಬಜೆಟ್ ಕೊಟ್ಟಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಲ್ಲ ವರ್ಗದ ಜನರ ಹಿತ ಕಾಯುವ ಬಜೆಟ್ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ 16ನೇ ಬಜೆಟ್ ರಾಜ್ಯದ ಎಲ್ಲ ವರ್ಗದ ಜನರ ಹಿತ ಕಾಯುವ ಬಜೆಟ್ ಆಗಿದೆ ಅದರಲ್ಲೂ ವಿಶೇಷವಾಗಿ ಆರ್ಥಿಕವಾಗಿ ಹಿಂದುಳಿದ ಅಲ್ಪಸಂಖ್ಯಾತ ಸಮುದಾಯವನ್ನು ಸಬಲಿಕರಿಸಲು ಬಜೆಟ್ ನಲ್ಲಿ ಕೆಲವು ವಿಶೇಷ ಘೋಷಣೆಗಳನ್ನು ಮಾಡಿದ್ದು ಸಂತಸದ ವಿಷಯ. ರಾಜ್ಯದ ಅಭಿವೃದ್ಧಿಯ ಹಿತದೃಷ್ಟಿಯಿಂದ ಅತ್ಯುತ್ತಮ ಬಜೆಟ್ ಮಂಡಿಸಿದ ಸಿಎಂ ಸಿದ್ದರಾಮಯ್ಯನವರಿಗೆ ಅಭಿನಂದಿಸುತ್ತೇನೆ.

–ಎಂ.ಕೆ.ಚೋರಗಸ್ತಿ ಅಧ್ಯಕ್ಷ ಬ್ಲಾಕ್ ಕಾಂಗ್ರೆಸ್ ತಾಳಿಕೋಟಿ.

## ಕೆಂಭಾವಿ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಉಚಿತ ಆರೋಗ್ಯ ಶಿಬಿರ ಉದ್ಘಾಟನೆ




ಮಲ್ಲಮ್ಮ ನುಡಿ ವಾರ್ತೆ

ಕೆಂಭಾವಿ:ಜನ ಔಷಧಿ ದಿನಾಚರಣೆ ಅಂಗವಾಗಿ ಕೆಂಭಾವಿಯ ಸಮುದಾಯ ಆರೋಗ್ಯ ಕೇಂದ್ರ ಆವರಣದಲ್ಲಿ ಉಚಿತ ಆರೋಗ್ಯ ಶಿಬಿರವನ್ನು ಇಂದು ಉದ್ಘಾಟಿಸಲಾಗಿದೆ. ಸುರಪುರ ತಾಲ್ಲೂಕು ವೈದ್ಯಾಧಿಕಾರಿಗಳು ರಾಜ ವೆಂಕಟಪ್ಪ ನಾಯಕ್ ಅವರು ಶಿಬಿರವನ್ನು ಉದ್ಘಾಟಿಸಿದರು. ಈ ಸಂದರ್ಭದಲ್ಲಿ, ಊರಿನ ಪ್ರಮುಖರಾದ ರವಿ ಸೊನ್ನದ್, ಶರಣಪ್ಪ, ಪುರಸಭೆಯ ಸದಸ್ಯರು ಮತ್ತು ಪುರಸಭೆಯ ಅಧ್ಯಕ್ಷರಾದ ರೈಮನ್ ಪಟೇಲ್ ಉಪಸ್ಥಿತರಿದ್ದರು.

ಈ ಉಚಿತ ಆರೋಗ್ಯ ಶಿಬಿರದ ಪ್ರಾರಂಭವು ಗ್ರಾಮಸ್ಥರಿಗೆ ಮೂಲಭೂತ ಆರೋಗ್ಯ ಸೇವೆಗಳನ್ನು ತಲುಪಿಸಲು ಮಹತ್ವಪೂರ್ಣ ಹಂತವಾಗಿದೆ. ಈ ಶಿಬಿರದಲ್ಲಿ ವೈದ್ಯಕೀಯ ಪರೀಕ್ಷೆಗಳು, ಉಚಿತ ಔಷಧಿ ವಿತರಣೆ, ಹಾಗೂ ಆರೋಗ್ಯ ಸಂಬಂಧಿ ಸಲಹೆಗಳು ನೀಡಲಾದವು.

ರಾಜ ವೆಂಕಟಪ್ಪ ನಾಯಕ್ ಅವರು ತಮ್ಮ ಭಾಷಣದಲ್ಲಿ, "ಜನರ ಆರೋಗ್ಯ ನಮ್ಮ ಮೂಲಭೂತ ಕಾಳಜಿಯಾಗಿದೆ. ಈ ಹಂಗೆ ನಾವು ಗ್ರಾಮೀಣ ಪ್ರದೇಶಗಳಲ್ಲಿ ತ್ವರಿತ ಹಾಗೂ ಸರ್ವಾಂಗೀಣ ಆರೋಗ್ಯ ಸೇವೆಗಳನ್ನು ತಲುಪಿಸು ಮುನ್ನ, ಜನರ ಒಳಗೊಂಡ ಸುದೀರ್ಘ ಆರೋಗ್ಯ ಸಮಸ್ಯೆಗಳ ಪರಿಹಾರಕ್ಕೆ ಕೆಲಸ ಮಾಡುತ್ತೇವೆ" ಎಂದು ಹೇಳಿದರು.

ಈ ಕಾರ್ಯಕ್ರಮವು ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಜಾಗೃತಿ ಮೂಡಿಸುವ ಪ್ರಮುಖ ಹೆಜ್ಜೆಯಾಗಿದ್ದು, ಸಾರ್ವಜನಿಕರ ಆರೋಗೆ ಹಿತ್ತಿನ ಮೆಟ್ಟಿಲಿಗೆ ಒಂದು ಶಕ್ತಿವೃದ್ಧಿಸುವ ಯೋಜನೆಯಾಗಿ ಪರಿಗಣಿಸಲಾಗಿದೆ.

ಪುರಸಭೆಯ ಅಧ್ಯಕ್ಷರಾದ ರೈಮನ್ ಪಟೇಲ್ ಅವರು ಈ ಕಾರ್ಯಕ್ರಮದ ಮಹತ್ವವನ್ನು ಪ್ರತಿಪಾದಿಸಿ, "ನಾವು ಸಮುದಾಯದ ಎಲ್ಲಾ ಸದಸ್ಯರಿಗಾಗಿ ಹೆಚ್ಚಿನ ಆರೋಗ್ಯ ಸೇವೆಗಳನ್ನು ಒದಗಿಸಲು ಸದಾ ಸಿದ್ಧವಿದ್ದೇವೆ" ಎಂದರು.

## ಹೊಳಸಮುದ್ರ ಕ್ಲಸ್ಟರ್ ಮಟ್ಟದ ಎಫ್.ಎಲ್.ಎನ್. ಮಕ್ಕಳ ಕಲಿಕಾ ಹಬ್ಬ



ಮಲ್ಲಮ್ಮ ನುಡಿ ವಾರ್ತೆ

ತಾಲೂಕಿನ ಹೊಳಸಮುದ್ರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಹೊಳಸಮುದ್ರ ಕ್ಲಸ್ಟರ್ ಮಟ್ಟದ ಎಫ್.ಎಲ್.ಎನ್. ಮಕ್ಕಳ ಕಲಿಕಾ ಹಬ್ಬವನ್ನು ನಡೆಯಿತು.

ಶಿಕ್ಷಣ ಸಂಯೋಜಕ ಸಂಜೀವಕುಮಾರ ಮೈತ್ರೆ ಪ್ರಾಸ್ತವಿಕ ಮಾತನಾಡಿ, ಸರಕಾರಿ ಶಾಲೆಗಳಲ್ಲಿ 1 ರಿಂದ 5 ತರಗತಿವರೆಗೆ ಅಭ್ಯಾಸ ಮಾಡುತ್ತಿರುವ ಮಕ್ಕಳಿಗಾಗಿ ಸರ್ಕಾರದ ಮತ್ತು ಇಲಾಖೆಯ ಆದೇಶದಂತೆ ಕಲಿಕಾ ಹಬ್ಬವನ್ನು ಆಯೋಜನೆ ಮಾಡುತ್ತಿದ್ದು, ಬಹಳ ಒಳ್ಳೆಯ ಕಾರ್ಯಕ್ರಮ ಇದಾಗಿದ್ದು ಮಕ್ಕಳು ಸಂತೋಷದಿಂದ, ಮೋಜಿನೊಂದಿಗೆ ಕಲಿಯಲು ಸಹಾಯಕವಾಗಿದೆ ಎಂದು ಹೇಳಿದರು.

ಕಾರ್ಯಕ್ರಮದ ಕೊನೆಯಲ್ಲಿ 7 ಚಟುವಟಿಕೆಗಳಲ್ಲಿ ಭಾಗವಹಿಸಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನವನ್ನು ಪಡೆದ ಮಕ್ಕಳಿಗೆ ಪ್ರಶಸ್ತಿ ಪತ್ರ ಮತ್ತು ಬಹುಮಾನ ನೀಡಿ ಅಭಿನಂದಿಸಲಾಯಿತು.

ಮಾನವ ದೇಹ, ಮೆದುಳು, ಜಠರ, ಅಮೀಬಾ ಹೀಗೆ ಮುಂತಾದ ವಿಜ್ಞಾನಕ್ಕೆ ಸಂಬಂದಿಸಿದ ಜೀವಿಗಳು, ಮಾನವನ ದೇಹದ ಭಾಗಗಳು ಮಕ್ಕಳು ರಂಗೋಲಿಯಲ್ಲಿ ಬಿಡಿಸಿದು ನೋಡುಗರ ಗಮನ ಸೆಳಿತು.

ಮಕ್ಕಳು, ಶಿಕ್ಷಕರು, ಅತಿಥಿಗಳು, ಪಾಲಕರು ಕಿರೀಟಗಳು ಹಾಕಿಕೊಂಡು ಸೆಲ್ಫಿ ಸ್ಟ್ಯಾಂಡ್ ನಲ್ಲಿ ಫೋಟೋಗಳು ತೆಗೆದು-ಕೊಂಡು ಸಂಭ್ರಮ ಪಟ್ಟರು.

ಸ್ಥಳೀಯ ಶಾಲೆಯ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಪ್ರಶಾಂತ ಬಿರಾದಾರ ಕಾರ್ಯಕ್ರಮದ ಅಧ್ಯಕ್ಷತೆವಹಿಸಿದರು. ರಾಜಕುಮಾರ ವಡಗಾವೆ, ಸಚಿನ್ ಸಿಂಧೆ, ಔರಾದ ತಾಲೂಕಿನ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಸಂಜುಕುಮಾರ ಮೇತ್ರೆ ,ಬಸವರಾಜ ಮಹಾಜನ, ಬಸವರಾಜ ಜಾಗಾವೆ, ಸಿ.ಆರ್.ಪಿ.ಗಳಾದ ರೋಹಿದಾಸ ಮೇತ್ರೆ, ನವನಾಥ ಬೊರೋಳೆ ವಲಯದಲ್ಲಿನ ಶಾಲೆಗಳ ಮುಖ್ಯಗುರುಗಳು, ಶಿಕ್ಷಕರು, ಪಾಲಕರು ಹಾಗೂ ಮಕ್ಕಳು ಸೇರಿದರು.

ಕ್ಲಾಸಿಫೈಡ್ಸ್....

## ಹೆಸರಿನ ಬದಲಾವಣೆ

ಸಂಗೀತಾ ತಂದೆ ಬಸವರಾಜ್ ಎಖ್ಖೇಳಿ ವಯಸ್ಸು 46 ವರ್ಷ ಮು॥ ಹುಡಗಿ ತಾ॥ ಹುಮನಾಬಾದ, ಜಿ॥ ಬೀದರ, ಆದ ನಾನು ಈ ಕೆಳಗಿನಂತೆ ಹೇಳಿಕೆ ನೀಡಿ ಹೆಸರು ಬದಲಾವಣೆ ಮಾಡಿಕೊಂಡಿರುತ್ತೇನೆ.

ನಾನು ನನ್ನ ಶಾಲಾ ದಾಖಲಾತಿಯಲ್ಲಿ ಸಂಗೀತಾ ತಂದೆ ಬಸವರಾಜ್ ಎಖ್ಖೇಳಿ, 1995ರಲ್ಲಿ ಮದುವೆಯಾದ ನಂತರ ಗಂಡನ ಮನೆಯಲ್ಲಿ ಗೀತಾ ಗಂಡ ರಘುವೀರ ಮಾಶೆಟ್ಟಿ ಎಂದು ಹೆಸರು ಬದಲಾಯಿಸಿಕೊಂಡಿರುತ್ತೇನೆ. ನನ್ನ ಆಧಾರ್ ಕಾರ್ಡ್ ನಂ. 8052 3689 8620 ಹಾಗೂ ಓಟರ್ ಐಡಿ LZN1245612 (29-08-2002) ಗಳಲ್ಲಿ ನನ್ನ ಹೆಸರನ್ನು ಗೀತಾ ಗಂಡ ರಘುವೀರ ಮಾಶೆಟ್ಟಿ ಎಂದು ದಾಖಲಿಸಿರುತ್ತೇನೆ. ನನ್ನ ಹೆಸರಿನ ಬದಲಾವಣೆಯನ್ನು ನೋಟರಿಯವರ ಸಮ್ಮುಖದಲ್ಲಿ 05-12-2023 ರಂದು ಸಂಗೀತಾ ಬದಲಿಗೆ ಗೀತಾ ಎಂದು ಘೋಷಣೆ ಮಾಡಿಕೊಂಡಿರುತ್ತೇನೆ.

ಇನ್ನು ಮುಂದೆ ನನ್ನ ಹೆಸರು ಸಂಗೀತಾ ಬದಲಿಗೆ ಗೀತಾ ಗಂಡ ರಘುವೀರ ಮಾಶೆಟ್ಟಿ ಎಂದು ಬದಲಾಯಿಸಿಕೊಂಡಿದ್ದಾಗಿ ಸ್ವಇಚ್ಛೆಯಿಂದ ಘೋಷಣೆ ಮಾಡಿರುತ್ತೇನೆ.

ಸ್ಥಳ:ಹುಡಗಿ
ದಿನಾಂಕ:6-03-2025

ಸಹಿ/- ಗೀತಾ
(ಗೀತಾ ಗಂಡ ರಘುವೀರ ಮಾಶೆಟ್ಟಿ)
ನಂ.8/16 ಬಸವೇಶ್ವರ ಚೌಕ ಹುಡಗಿ-585329
ತಾ॥ ಹುಮನಾಬಾದ ಜಿ॥ ಬೀದರ
ಮೊ.7829206864


ಕರ್ನಾಟಕ ಸರ್ಕಾರ. ಗ್ಯಾರಂಟಿ ಸರ್ಕಾರ
ಶಕ್ತಿ
ಮಹಿಳೆಯರಿಗೆ
ಬಸ್ ಪ್ರಯಾಣ ಉಚಿತ
ಮಹಿಳೆಯರ ಸಬಲೀಕರಣಕ್ಕೆ
ಮಾದರಿ ಯೋಜನೆ
62 ಲಕ್ಷ
ಮಹಿಳೆಯರು ಹಾಗೂ ಯುವತಿಯರು ಪ್ರತಿದಿನ ಉಚಿತ ಪ್ರಯಾಣ ಮಾಡುತ್ತಿರುವರು
136 ಕೋಟಿ
ಮಹಿಳೆಯರು, ಯುವತಿಯರು ಮತ್ತು ವಿದ್ಯಾರ್ಥಿನಿಯರು ಇಂದಿನವರೆಗೆ ಉಚಿತ ಪ್ರಯಾಣ ಮಾಡಿದ್ದಾರೆ.
ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶಕ್ತಿ
ಉಚಿತ ಪ್ರಯಾಣ
ದೂರದೃಷ್ಟಿಯ ಹರಿಕಾರ ಸನ್ಮಾನ್ಯ ಮುಖ್ಯಮಂತ್ರಿ, ಶ್ರೀ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಕರ್ನಾಟಕ ಸರ್ಕಾರವು ರಾಜ್ಯದ ಎಲ್ಲಾ ಮಹಿಳೆಯರಿಗೆ, ಯುವತಿಯರಿಗೆ ಮತ್ತು ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪ್ರಯಾಣ ಸೌಲಭ್ಯ ಕಲ್ಪಿಸುವ ಮೂಲಕ ಪ್ರಯಾಣದ ನೂತನ ಸ್ವಾತಂತ್ರ್ಯ ಕಲ್ಪಿಸಿದೆ.
ಗೃಹ ಜ್ಯೋತಿ ಪ್ರತಿ ಮನೆಗೆ 200
1.59 ಕೋಟಿಗೂ ಅಧಿಕ ಕುಟುಂಬಗಳಿಗೆ ಉಚಿತ ವಿದ್ಯುತ್ ನೀಡಿಕೆ
ಗೃಹಲಕ್ಷ್ಮಿ ₹2000
1.09 ಕೋಟಿ ಖಾತೆಗಳಿಗೆ ನಗದು ವರ್ಗಾವಣೆ
ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಶಕ್ತಿ ಯೋಜನೆ ಅನ್ವಯ ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಮಹಿಳೆಗೆ ಮೊದಲ ಉಚಿತ ಟಿಕೆಟ್ ನೀಡುತ್ತಿರುವುದು.
3.99 ಕೋಟಿ ಫಲಾನುಭವಿಗಳಿಗೆ 3751 ಕೋಟಿ ರೂ. ವರ್ಗಾವಣೆ
ಅನ್ನಭಾಗ್ಯ 10 kg
4.5 ಲಕ್ಷ ಯುವ ಜನರಿಗೆ ನೆರವಾಗುವ ನಿರೀಕ್ಷೆ
ಯುವನಿಧಿ ₹3000 ₹1500
ನುಡಿದಂತೆ ನಡೆದಿದ್ದೇವೆ...
ಕರ್ನಾಟಕದಲ್ಲಿ 96% ಗೂ ಹೆಚ್ಚಿನ ಜನರು ಒಂದು ಅಥವಾ ಹೆಚ್ಚು ಗ್ಯಾರಂಟಿ ಯೋಜನೆಗಳ ಅನುಕೂಲವನ್ನು ಪಡೆಯುತ್ತಿರುವರು.
"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"
CMofKarnataka https://dipr.karnataka.gov.in/
ಕರ್ನಾಟಕ ವಾರ್ತೆ
ಗಡಿಭಾಗದ ಹಾಗೂ ವಿಶೇಷ ಮಾಧ್ಯಮ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

5 ಕೆ.ಜಿ ಆಹಾರಧಾನ್ಯ ಬದಲಾಗಿ ಪ್ರತಿ ಕೆ.ಜಿ 34 ರೂ.ಗಳಂತೆ ಪಡಿತರ ಚೀಟಿಯಲ್ಲಿನ

# ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ಡಿ.ಬಿ.ಟಿ ಮೂಲಕ 170 ರೂ.ಗಳಂತೆ ಹಣವನ್ನು ವರ್ಗಾವಣೆ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ : ಮಾರ್ಚ್ 07, ಅಂತ್ಯೋದಯ್ಯ ಅನ್ನ ಯೋಜನೆ ಮತ್ತು ಆದ್ಯತಾ ಪಡಿತರಚೀಟಿಗಳ(ಬಿಪಿಎಲ್) ಪ್ರತಿಫಲಾನುಭವಿಗೆರಾಷ್ಟ್ರೀಯ ಆಹಾರಭದ್ರತಾಕಾಯ್ದೆಯನ್ವಯ (ಎನ್‌ಎಫ್‌ಎಸ್‌ಎ)ಯಡಿ ವಿತರಿಸಲಾಗುವ 5 ಕೆ.ಜಿ ಆಹಾರಧಾನ್ಯದೊಂದಿಗೆ ರಾಜ್ಯಸರ್ಕಾರದವತಿಯಿಂದ ಹೆಚ್ಚುವರಿಯಾಗಿ 5 ಕೆ.ಜಿ ಆಹಾರಧಾನ್ಯಬದಲಾಗಿ ಪ್ರತಿ ಕೆ.ಜಿ 34ರೂ.ಗಳಂತೆ ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ಡಿ.ಬಿ.ಟಿ ಮೂಲಕ 170 ರೂ.ಗಳಂತೆ ಹಣವನ್ನು ವರ್ಗಾಯಿಸಲಾಗುತ್ತಿರುತ್ತದೆ ಎಂದುಯಾದಗಿರಿಜಿಲ್ಲಾಧಿಕಾರಿ ಡಾ.ಸುಶೀಲಾ.ಬಿ ಅವರು ತಿಳಿಸಿದ್ದಾರೆ.2025ರಫೆಬ್ರವರಿ ತಿಂಗಳದಿಂದಹಣದಬದಲಾಗಿ ಅಕ್ಕಿಯನ್ನೇ ನೀಡುವ ಕುರಿತು ಸರ್ಕಾರವು ತೀರ್ಮಾನಿಸಿ ಆದೇಶವನ್ನುಹೊರಡಿಸಲಾಗಿರುತ್ತದೆ. ಫೆಬ್ರವರಿ-2025ನೇಮಾಹೆಯ ಸಂಬಂಧಿಸಿದಂತೆ 5 ಕೆ.ಜಿ ಅಕ್ಕಿಯನ್ನು2025ರಮಾರ್ಚ್ ತಿಂಗಳಪಡಿತರ ವಿತರಣೆಯಲ್ಲಿ ಸೇರ್ಪಡೆಗೊಳಿಸಿ ಆಯುಕ್ತರು, ಆಹಾರನಾಗರಿಕಸರಬರಾಜು ಮತ್ತುಗ್ರಾಹಕರವ್ಯವಹಾರಗಳ ಇಲಾಖೆ ಬೆಂಗಳೂರು ಇವರು ಹಂಚಿಕೆ ಮಾಡಿಲಾಗಿದೆ.

ಸದಸ್ಯರಸಂಖ್ಯೆ1ಸದಸ್ಯರಿರುವ ಪ.ಚೀಟಿ35 ಅಂತ್ಯೋದಯ ಪಡಿತರ ಚೀಟಿ (NFSA ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ) 15 ಆದ್ಯತಾ ಪಡಿತರ ಚೀಟಿ (ಓಈಖಂ ಹಾಗೂ 2025ರ ಫೆಬ್ರವರಿ,ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ) ಇದೆ. ಸದಸ್ಯರ ಸಂಖ್ಯೆ 2 ಸದಸ್ಯರಿರುವ ಪ.ಚೀಟಿ 35 ಅಂತ್ಯೋದಯ ಪಡಿತರ ಚೀಟಿ (NFSA ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ), 30 ಆದ್ಯತಾ ಪಡಿತರ ಚೀಟಿ (NFSA ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ) ಇದೆ. ಸದಸ್ಯರ ಸಂಖ್ಯೆ 3 ಸದಸ್ಯರಿರುವ ಪ.ಚೀಟಿ 35 ಅಂತ್ಯೋದಯ ಪಡಿತರ ಚೀಟಿ (NFSA ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ), 45 ಆದ್ಯತಾ ಪಡಿತರ ಚೀಟಿ (NFSA ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ) ಇದೆ.

ಸದಸ್ಯರಸಂಖ್ಯೆ4ಸದಸ್ಯರಿರುವ ಪ.ಚೀಟಿ 45 ಅಂತ್ಯೋದಯ ಪಡಿತರ ಚೀಟಿ (NFSA ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ), 60 ಆದ್ಯತಾ ಪಡಿತರ ಚೀಟಿ (ಓಈಖಂ ಹಾಗೂ 2025ರ ಫೆಬ್ರವರಿ,ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ) ಇದೆ. ಸದಸ್ಯರ ಸಂಖ್ಯೆ 5 ಸದಸ್ಯರಿರುವ ಪ.ಚೀಟಿ 65 ಅಂತ್ಯೋದಯ ಪಡಿತರ ಚೀಟಿ (ಓಈಖಂ ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ), 75 ಆದ್ಯತಾ ಪಡಿತರ ಚೀಟಿ (ಓಈಖಂ ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ) ಇದೆ. ಸದಸ್ಯರ ಸಂಖ್ಯೆ 6 ಸದಸ್ಯರಿರುವ ಪ.ಚೀಟಿ 85 ಅಂತ್ಯೋದಯ ಪಡಿತರ ಚೀಟಿ (ಓಈಖಂ ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ), 96 ಆದ್ಯತಾ ಪಡಿತರ ಚೀಟಿ (NFSA ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ) ಇದೆ. ಸದಸ್ಯರ ಸಂಖ್ಯೆ 7 ಸದಸ್ಯರಿರುವ ಪ.ಚೀಟಿ 105 ಅಂತ್ಯೋದಯ ಪಡಿತರ ಚೀಟಿ (NFSA ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ), 105 ಆದ್ಯತಾ ಪಡಿತರ ಚೀಟಿ (NFSA ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ) ಇದೆ. ಸದಸ್ಯರ ಸಂಖ್ಯೆ 8 ಸದಸ್ಯರಿರುವ ಪ.ಚೀಟಿ 125 ಅಂತ್ಯೋದಯ ಪಡಿತರ ಚೀಟಿ (NFSA ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ), 120 ಆದ್ಯತಾ ಪಡಿತರ ಚೀಟಿ (ಓಈಖಂ ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ) ಇದೆ. ಸದಸ್ಯರ ಸಂಖ್ಯೆ 9 ಸದಸ್ಯರಿರುವ ಪ.ಚೀಟಿ 145 ಅಂತ್ಯೋದಯ ಪಡಿತರ ಚೀಟಿ (NFSA ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ), 135 ಆದ್ಯತಾ ಪಡಿತರ ಚೀಟಿ (ಓಈಖಂ ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ) ಇದೆ. ಸದಸ್ಯರ ಸಂಖ್ಯೆ 10 ಸದಸ್ಯರಿರುವ ಪ.ಚೀಟಿ 165 ಅಂತ್ಯೋದಯಪಡಿತರಚೀಟಿ (NFSA ಹಾಗೂ 2025ರ ಫೆಬ್ರವರಿ,ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ),150 ಆದ್ಯತಾ ಪಡಿತರ ಚೀಟಿ (ಓಈಖಂ ಹಾಗೂ 2025ರ ಫೆಬ್ರವರಿ, ಮಾರ್ಚ್ ಮಾಹೆಯ ಹೆಚ್ಚುವರಿ 5 ಕೆ.ಜಿ ರಂತೆ ಸೇರಿ ಒಟ್ಟು ಪ್ರಮಾಣ (ಕೆ.ಜಿ ಗಳಲ್ಲಿ) ಇದೆ. 2025ರ ಮಾರ್ಚ್ ಮಾಹೆ ಪಡಿತರ ಆಹಾರಧಾನ್ಯವಿತರಣೆಪ್ರಮಾಣ 10 ಕ್ಕಿಂತ ಮೇಲ್ಪಟ್ಟು ಸದಸ್ಯರು ಇದ್ದಲ್ಲಿ ಇದೇ ಅನುಪಾತ ಮುಂದುವರೆಯುತ್ತದೆ. ಒಂದು ವೇಳೆ ನ್ಯಾಯಬೆಲೆ ಅಂಗಡಿಯವರು ಕಡಿಮೆ ಪ್ರಮಾಣವಿತರಿಸಿದ್ದಲ್ಲಿತಾಲ್ಲೂಕು ಮಟ್ಟದಲ್ಲಿ ಆಯಾ ತಾಲ್ಲೂಕಿನ ತಹಸೀಲ್ದಾರರಿಗೆ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲೆಯ ಉಪ ನಿರ್ದೇಶಕರ ಕಛೇರಿಗೆ ದೂ.ಸಂ.08473253707ಅಥವಾ ಸಹಾಯವಾಣಿ 1967 ಸಂ-ಖ್ಯೆಗೆ ದೂರನ್ನುದಾಖಲಿಸಲು ಕೋರಿದೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# 5ಕೆ, 10ಕೆ ಓಟಕ್ಕೆ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಮಾರ್ಚ್ 07-: ರಾಜ್ಯಾದ್ಯಂತ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯು ಹಾಗೂ ಯಾದಗಿರಿ ಜಿಲ್ಲಾ ಪೊಲೀಸ್ ವತಿಯಿಂದ ವ್ಯಸನ ಮುಕ್ತ ಸಮಾಜ ಮತ್ತು ಅಪರಾಧ ಮುಕ್ತಸಮಾಜಧ್ಯೇಯದೊಂದಿಗೆ ಇದೇ 2025ರ ಮಾರ್ಚ್ 9ರ ಭಾನುವಾರ ರಂದು 5ಕೆ, 10ಕೆ ಓಟವನ್ನು ಆಯೋಜಿಸಲಾಗಿದೆ ಎಂದು ಯಾದಗಿರಿ ಪೊಲೀಸ್ ವರಿಷ್ಠಾಧಿಕಾರಿ ಶ್ರೀ ಪೃಥ್ವಿಕ್ ಶಂಕರ್ ಅವರು ತಿಳಿಸಿದ್ದಾರೆ.

ಯಾದಗಿರಿ ಜಿಲ್ಲಾ ಪೊಲೀಸ್ ವತಿದಿಂದ ವ್ಯಸನ ಮುಕ್ತ ಸಮಾಜ ಮತ್ತು ಅಪರಾಧ ಮುಕ್ತ ಸಮಾಜ ಧ್ಯೇಯದೊಂದಿಗೆ 5ಕೆ, 10ಕೆ ಓಟವನ್ನು 2025ರ ಮಾರ್ಚ 9ರ ಭಾನುವಾರ ರಂದು ಅಂದು ಬೆಳಿಗ್ಗೆ 6.30 ಗಂ-ಟೆಗೆ ಲುಂಬಿನಿ ಗಾರ್ಡನ್‌ನಿಂದ ಪ್ರಾರಂಭಿಸಲಾಗುವುದು.5ಕೆಓಟದ ಮಾರ್ಗ ಲುಂಬಿನಿ ಗಾರ್ಡನ್ ಹೊಸಳ್ಳಿ ಕ್ರಾಸ್ ಗಂಜ್ ಸರ್ಕಲ್ ಮರಳಿ ಗಂಜ್ ಸರ್ಕಲ್ ಹೊಸಳ್ಳಿ ಕ್ರಾಸ್ ಲುಂಬಿನಿ ಗಾರ್ಡನ್ ವರೆಗೆ ನಡೆಯಲಿದೆ. 10ಕೆ ಓಟದ ಮಾರ್ಗ ಹೊಸಳ್ಳಿ ಕ್ರಾಸ್ ಹೊಸ ಬಸ್ ಸ್ಟಾಂಡ್-ಶಾಸ್ತ್ರಿ ಸರ್ಕಲ್ ಸುಭಾಷ ಸರ್ಕಲ್ ಸರಕಾರಿ ಪ್ರಥಮ ದರ್ಜೆ ಕಾಲೇಜು ಕನಕ ಸರ್ಕಲ್ ಅಂಬೇಡ್ಕರ್ ಸರ್ಕಲ್ ಲುಂಬಿನಿ ಗಾರ್ಡನ್ ವರೆಗೆ ನಡೆಯಲಿದೆ. ಸಾರ್ವಜನಿಕರು, ಕಾಲೇಜು ವಿದ್ಯಾರ್ಥಿಗಳು, ಯಾದಗಿರಿ ನಗರದ ಗಣ್ಯವ್ಯಕ್ತಿಗಳು ಹಾಗೂ ಆಸಕ್ತರು ಈ ಓಟದಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ



ಯಾದಗಿರಿ:ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಇದೇ 2025ರ ಮಾರ್ಚ್ 11ರ ಮಂಗಳವಾರದಂದು ಜಿಲ್ಲಾಡಳಿತಭವನ ಆಡಿಟೋ-ರಿಯಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಸುಶೀಲಾ.ಬಿ ಅವರು ತಿಳಿಸಿದ್ದಾರೆ.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಪ್ರಯುಕ್ತ ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಮಹಿಳಾ ಸಾಧಕೀಯರಿಗೆ ಸನ್ಮಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದ್ದು, ಈ ಕಾರ್ಯಕ್ರಮಕ್ಕೆ ಎಲ್ಲಾ ಇಲಾಖೆಗಳ ಮುಖ್ಯಸ್ಥರು ಹಾಗೂ ಮಹಿಳಾ ಅಧಿಕಾರಿ, ಸಿಬ್ಬಂದಿಗಳು ತಪ್ಪದೇ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ಸಿಎಂ ಸಿದ್ದರಾಮಯ್ಯ ಮಂಡಿಸಿದ ಬಜೆಟ್ ರಾಜ್ಯದ ಸರ್ವತೋಮುಖ ಅಭಿವೃದ್ಧಿಯ ಮುನ್ನೋಟದೊಂದಿಗೆ ಕರ್ನಾಟಕ ಸಶಕ್ತಿ, ಸಮೃದ್ಧಿ, ಸ್ವಾವಲಂಬನೆಯ ಹಾದಿಯಲ್ಲಿ ಮುನ್ನಡೆಸಲಿದೆ.

ರಾಜ್ಯದ ಜನರ ನಿರೀಕ್ಷೆಯಂತೆ ಎಲ್ಲಾ ವರ್ಗದವರಿಗೆ ಹಾಗೂ ಜನಸಾಮಾನ್ಯರ ಅಭಿವೃದ್ಧಿ ಮತ್ತು ಹಿತಾಸಕ್ತಿಯನ್ನು ಆಲೋಚಿಸಿ ಬಜೆಟ್ ಮಂಡಿಸಲಾಗಿದೆ. (ಮಲ್ಲಮ್ಮ ನುಡಿ ಚಿತ್ರ)

**-ಜಿಲ್ಲಾಧ್ಯಕ್ಷರು ಎಐಸಿಸಿ ಹ್ಯೂಮನ್ ರೈಟ್ಸ್**



ಐತಿಹಾಸಿಕ ಬಜೆಟ್ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಂಡಿಸಿದ 16ನೇ ಬಜೆಟ್ ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಮುಂದಿಟ್ಟುಕೊಂಡು ಅವರ ಅಪಾರ ಅನುಭವದ ಆಧಾರದಲ್ಲಿ ಸಿದ್ಧಪಡಿಸಿದ ಬಜೆಟ್ ಆಗಿದ್ದು ಇದರಲ್ಲಿ ರಾಜ್ಯದ ಎಲ್ಲ ಜನರ ಹಿತವನ್ನು ಕಾಪಾಡಲಾಗಿದೆ. ಐತಿಹಾಸಿಕ ಬಜೆಟ್ ಮಂಡಿಸಿದ ಸಿದ್ದರಾಮಯ್ಯನವರಿಗೆ ಅಭಿನಂದಿಸುತ್ತೇನೆ.

**-ವಿಜಯಸಿಂಗ್ ಹಜೇರಿ ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ.**

# ಇಂದು ಮುಖ್ಯಮಂತ್ರಿಗಳಿಂದ ಕಲ್ಯಾಣ ಪಥ ಯೋಜನೆಯ ಪ್ರಾರಂಭೋತ್ಸವಕ್ಕೆ ಚಾಲನೆ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮಾ.07- ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ಬೆಂಗಳೂರು ಇವರ ವತಿಯಿಂದ ಕಲ್ಯಾಣ ಪಥ ಯೋಜನೆಯಡಿ ಕಲ್ಯಾಣ ಕರ್ನಾಟಕದ 38 ಗ್ರಾಮೀಣ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆಯ ಮಾದರಿಯಲ್ಲಿ ಒಟ್ಟು 1166 ಕಿ.ಮೀ. ಉದ್ದದ ರಸ್ತೆಗಳನ್ನು 1000 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿರುವ ಯೋಜನೆಯಪ್ರಾರಂಭೋತ್ಸವ) ಕಲ್ಯಾಣ ಪಥ ಯೋಜನೆಯ ಪ್ರಾರಂಭೋತ್ಸವದಉದ್ಘಾಟನಾ ಸಮಾರಂಭವನ್ನು ಮಾರ್ಚ್ 8 ರಂದು ಶನಿವಾರ ಬೆಳಿಗ್ಗೆ 11.30 ಗಂಟೆಗೆ ಜೇವರ್ಗಿ ತಾಲೂಕಿನ ಕಟ್ಟಿ ಸಂಗಾವಿಯ ತಾಯಿ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆ ಹತ್ತಿರದಲ್ಲಿ ಹಮ್ಮಿಕೊಳ್ಳಲಾಗಿದೆ.

ರಾಜ್ಯದ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರು ಕಲ್ಯಾಣ ಪಥ ಯೋಜನೆಯ ಪ್ರಾರಂಭೋತ್ಸವಕ್ಕೆ ಚಾಲನೆ ನೀಡುವರು. ರಾಜ್ಯಸಭೆಯ ವಿರೋಧ ಪಕ್ಷದ ನಾಯಕರು ಹಾಗೂ ರಾಜ್ಯಸಭಾ ಸದಸ್ಯ ಡಾ. ಮಲ್ಲಿಕಾರ್ಜುನ ಖರ್ಗೆ ಅವರು ಘನ ಉಪಸ್ಥಿತಿ ವಹಿಸುವರು. ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವರಾದ ಪ್ರಿಯಾಂಕ್ ಖರ್ಗೆ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು.

ರಾಜ್ಯದ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಸಚಿವ ಬಿ.ಜೆಡ್. ಜಮೀರ್ ಅಹ್ಮದ್ ಖಾನ್, ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವ ಶರಣಬಸಪ್ಪ ದರ್ಶನಾಪೂರ, ಅರಣ್ಯ ಪರಿಸರ ಮತ್ತು ಜೀವಶಾಸ್ತ್ರ ಸಚಿವ ಈಶ್ವರ ಬಿ. ಖಂಡ್ರೆ, ಪೌರಾಡಳಿತ ಮತ್ತು ಹಜ್ ಸಚಿವ ರಹೀಮ್ ಖಾನ್, ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಖಾತೆ ಸಚಿವರಾದ ಡಾ. ಶರಣಪ್ರಕಾಶ ಪಾಟೀಲ, ಹಿಂದುಳಿದ ವರ್ಗಗಳ ಕಲ್ಯಾಣ, ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ ಶಿವರಾಜ ಸಂಗಪ್ಪ, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವ ಡಿ. ಸುಧಾಕರ್, ಸಣ್ಣ ನೀರಾವರಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಭೋಸರಾಜು, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣ ಸ್ವಾಮಿ, ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಂಪನಗೌಡ ಬಾದರ್ಲಿ, ಅಫಜಲಪುರ ಶಾಸಕ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದ ಅಧ್ಯಕ್ಷರಾದ ಎಂ.ವೈ. ಪಾಟೀಲ, ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ, ವಿರೋಧ ಪಕ್ಷದ ಮುಖ್ಯ ಸಚೇತಕ ದೊಡ್ಡನಗೌಡ ಹನಮಗೌಡ ಪಾಟೀಲ, ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯ-ಕ್ಷ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್, ಕೈಮಗ್ಗ ಅಭಿವೃದ್ಧಿ ನಿಗಮದ ಅಧ್ಯಕ್ಷ ಜೆ.ಎನ್. ಗಣೇಶ, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷ ಬಸನಗೌಡ ತುರುವಿಹಾಳ, ಕರ್ನಾಟಕ ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ್ ಅವರು ಗೌರವ ಉಪಸ್ಥಿತಿ ವಹಿಸುವರು. ಜೇವರ್ಗಿ ಶಾಸಕ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಅಧ್ಯಕ್ಷ ಡಾ. ಅಜಯಸಿಂಗ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

ಕಲಬುರಗಿ ಲೋಕಸಭಾ ಸದಸ್ಯ ರಾಧಾಕೃಷ್ಣ ದೊಡ್ಡಮನಿ, ರಾಯಚೂರ ಲೋಕಸಭಾ ಸದಸ್ಯ ಜಿ. ಕುಮಾರ್ ನಾಯಕ, ಬಳ್ಳಾರಿ ಲೋಕಸಭಾ ಸದಸ್ಯ ಈ. ತುಕಾರಾಮ್, ದಾವಣಗೆರೆ ಸಂಸದ ಡಾ. ಪ್ರಭಾ ಮಲ್ಲಿಕಾರ್ಜುನ್, ಕೊಪ್ಪಳ ಲೋಕಸಭಾ ಸದಸ್ಯ ರಾಜಶೇಖರ್ ಬಸವರಾಜ ಹಿಟ್ನಾಳ್, ಬೀದರ ಲೋಕಸಭಾ ಸದಸ್ಯ ಸಾಗರ ಈಶ್ವರ ಖಂಡ್ರೆ ಹಾಗೂ ಬಳ್ಳಾರಿ ರಾಜ್ಯಸಭಾ ಸದಸ್ಯ ಡಾ. ಸೈಯದ್ ನಾಸೀರ ಹುಸೇನ್ ಗೌರವಾನ್ವಿತರ ಅತಿಥಿಗಳಾಗಿ ಪಾಲ್ಗೊಳ್ಳುವರು.

ಕಾರ್ಯಕ್ರಮದಲ್ಲಿ ಶಾಸಕರುಗಳಾದ ಪ್ರಭು ಬಿ. ಚವ್ಹಾಣ, ಬಿ. ನಾಗೇಂದ್ರ, ಜಿ. ಹಂಪಯ್ಯ ನಾಯಕ, ಮಾನಪ್ಪ ಡಿ. ವಜ್ಜಲ್, ಡಾ. ಎಸ್. ಶಿವರಾಜ್ ಪಾಟೀಲ, ಕೆ. ರಾಘವೇಂದ್ರ ಹಿಟ್ನಾಳ್, ಹೆಚ್.ಆರ್. ಗವಿಯಪ್ಪ, ಕೆ. ನೇಮಿರಾಜನಾಯ್ಕ್, ಬಿ.ಎಮ್. ನಾಗರಾಜ್, ಶರಣು ಸಲಗರ, ಬಸವರಾಜ ಮತ್ತಿಮಡು, ಡಾ. ಅವಿನಾಶ ಉ. ಜಾಧವ, ಚನ್ನಾರೆಡ್ಡಿ ಪಾಟೀಲ ತುನ್ನೂರ್, ಅಲ್ಲಮಪ್ರಭು ಪಾಟೀಲ, ಬಿ. ದೇವೇಂದ್ರಪ್ಪ, ಗಾಲಿ ಜನಾರ್ಧನ ರೆಡ್ಡಿ, ಲತಾ ಮಲ್ಲಿಕಾರ್ಜುನ, ಈ. ಅನ್ನಪೂರ್ಣ, ಡಾ. ಶೈಲೇಂದ್ರ ಕೆ. ಬೆಲ್ದಾಳೆ, ಎಸ್.ಟಿ. ಶ್ರೀನಿವಾಸ, ಡಾ. ಸಿದ್ದಲಿಂಗಪ್ಪ ಎನ್. ಪಾಟೀಲ, ಶರಣಗೌಡ ಕಂದಕೂರ, ಕೃಷ್ಣ ನಾಯ್ಕ್, ರಾಜಾವೇಣುಗೋಪಾಲನಾಯಕ, ನಾರಾ ಭರತರೆಡ್ಡಿ, ಕರೆಮ್ಮ ಜಿ. ನಾಯಕ ಗೌರವಾನ್ವಿತರಾಗಿ ಪಾಲ್ಗೊಳ್ಳುವರು.

ವಿಧಾನ ಪರಿಷತ್ ಶಾಸಕರುಗಳಾದ ಶಶೀಲ ಜಿ. ನಮೋಶಿ, ಡಾ. ಬಿ.ಜಿ. ಪಾಟೀಲ, ಡಾ. ಚಂದ್ರಶೇಖರ ಪಾಟೀಲ ಹುಮನಾಬಾದ, ತಿಮ್ಮಣ್ಣಪ್ಪ ಕಮಕನೂರ, ಸುನೀಲ್ ವಲ್ಲ್ಯಾಪುರೆ, ಡಾ. ಸಾಬಣ್ಣ ತಳವಾರ, ವೈ.ಎಂ. ಸತೀಶ, ಶರಣಗೌಡ ಅ. ಪಾಟೀಲ ಬಯ್ಯಾಪುರ, ಭೀಮರಾವ ಬಿ. ಪಾಟೀಲ್, ಹೇಮಲತಾ ನಾಯಕ, ಬಸನಗೌಡ ಬಾದರ್ಲಿ, ಡಾ. ಎಂ.ಜಿ. ಮೂಳೆ, ಜಗದೇವ ಗುತ್ತೇದಾರ್ ಹಾಗೂ ಎ. ವಸಂತಕುಮಾರ್ ಅವರು ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳುವರು.

ಸರ್ಕಾರದ ಮುಖ್ಯ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ, ಅಭಿವೃದ್ಧಿ ಆಯುಕ್ತರು ಹಾಗೂ ಅಪರ ಮುಖ್ಯ ಕಾರ್ಯದರ್ಶಿ ಉಮಾ ಮಹಾದೇವನ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಅಂಜುಂ ಪರ್ವೇಜ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸುವರು.

# ರಂಜಾನ್ ಹಬ್ಬದ ಪ್ರಯುಕ್ತ ಹಿಂದುಗಳು ಒಂದು ದಿನದ ಇಫ್ತಾರ ಕೂಟ ಮಾಡಿ ಸಂಭ್ರಮ



ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿಜಿಲ್ಲೆಯ ಹುಣಸಗಿ ತಾಲೂಕಿನ ಮೇಲಿನಗಡ್ಡಿ ಗ್ರಾಮದಲ್ಲಿ ಗಂಗಯ್ಯಸ್ವಾಮಿ ಹಿರೇಮತ್ ಎಂಬುವರು ರಂಜಾನ್ ಹಬ್ಬದ ರೋಜ ದಿನದಂದು ಹಿಂದುಗಳು ಮುಸ್ಲಿಂ ಭಾಂದವರಿಗೆ ಒಂದು ದಿನ ಇಫ್ತಾರ್ ಕೂಟ ಮಾಡಿ ಭಾವುಕತೆ ಮೆರೆದರು ಗ್ರಾಮಸ್ಥರು

ಇಲ್ಲಿ ಹಿಂದು ಮುಸ್ಲಿಂ ನಾವೆಲ್ಲರೂ ಒಂದೇ ಎಂದು ಸಾರುವಂತಿದೆ ಮಾಡಿದ ಗಂಗಯ್ಯಸ್ವಾಮಿ ಹಿರೇಮತ್ ಇದೆ ಸಂದರ್ಭದಲ್ಲಿ ಜನಾಬ್ ಮಹಮ್ಮದ ಸುಲೇಮಾನ್, ರಾಜಮಹಮದ ಮುಲ್ಲಾ, ಮಕ್ತುಮಸಾಬ್‌ಮುಲ್ಲಾ,ಲಾಲಸಾಬ ಮುಲ್ಲಾ, ಬಡೆಸಾಬ್ ಅಂಗಡಿ, ಹಜರತಸಾಬ್ ಒತಗೇರಿ, ಶಮಶುದ್ದಿನ್ ಒತಗೇರಿ,ರಹಿಮಾನಸಾಬ್ ಮುಲ್ಲಾ, ಹುಸೇನಸಾಬ್ ಚವನಬಾವಿ,ಮದರಸಾಬ್ ರೋಡುಕುಂದಿ ಇನ್ನಿತರರು ಇದ್ದರು.



ಸಾಲದ ಹೊರೆ ಹೊತ್ತ ಬಜೆಟ್ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಸದನದಲ್ಲಿ ಮಂಡಿಸಿದ 16ನೇ ಬಜೆಟ್ ರಾಜ್ಯದ ಜನರಲ್ಲಿ ತೀವ್ರ ನಿರಾಸೆವನ್ನುಂಟು ಮಾಡಿದ ಬಜೆಟ್ ಆಗಿದ್ದು ಸಾಲದ ಹೊರೆ ಆಧಾರದಲ್ಲಿ ಸಿದ್ಧಪಡಿಸಿದ ಈ ಬಜೆಟ್ ನಿಂದ ಯಾರ ಕಲ್ಯಾಣವೂ ಸಾಧ್ಯವಿಲ್ಲ.

-ಮಾನಸಿಂಗ್ ಕೊಕಟನೂರ ಬಿಜೆಪಿ ಮುಖಂಡ.

# ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ಅಗತ್ಯ- ಶಾಂತಗೌಡ ಪಾಟೀಲ್

ಮಲ್ಲಮ್ಮ ನುಡಿ ವಾರ್ತೆ

ಶಹಪುರ-ಪ್ರಸ್ತುತದಿನಮಾನಗಳಲ್ಲಿ ಮಾನವೀಯ ಮೌಲ್ಯಗಳು ಕುಸಿಯುತ್ತಿವೆ,ಆದ್ದರಿಂದ ಇಂದಿನ ಪ್ರತಿಯೊಂದು ಮಗುವಿಗೂ ಮೌಲ್ಯಯುತವಾದ ಶಿಕ್ಷಣ ನೀಡುವುದು ಅತ್ಯಗತ್ಯವಾಗಿದೆ ಎಂದು ಜಿಲ್ಲಾ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿವೃತ್ತ ಉಪ ನಿರ್ದೇಶಕ ಶಾಂತಗೌಡ ಪಾಟೀಲ್ ಹೇಳಿದರು

ನಗರದ ಗದ್ದೆರಾಯನಗುಡಿ ಹತ್ತಿರವಾಗಿರುವ ಫೈವ್ ಸ್ಟಾರ್ ಫಂಕ್ಷನ್ ಸಭಾಂಗಣದಲ್ಲಿ ಕಲ್ಯಾಣ ನಾಡು ಸಾಹಿತ್ಯ ಮತ್ತು ಸಾಂಸ್ಕೃತಿಕ ನುಡಿಟ್ರಸ್ಟ್ ಹೆಗ್ಗಣದೊಡ್ಡಿ ಅಡಿಯಲ್ಲಿ ಲಿಟಲ್ ವಿಂಗ್ಸ್ - ಪ್ರೀ ಸ್ಕೂಲ್ ಪ್ರಥಮ ವಾರ್ಷಿಕೋತ್ಸವ ಹಾಗೂ ಸಾಂಸ್ಕೃತಿಕ ಸಮಾರಂಭದಲ್ಲಿ ಭಾಗವಹಿಸಿ ಮಾತನಾಡಿ,ಮಗುವಿಗೆ ಉತ್ತಮ ಶಿಕ್ಷಣ ನೀಡುತ್ತಾ ಬಂದಾಗ ಮಗುವಿನ ಕಲಿಕೆಯ ಅನುಭವ, ಯಶಸ್ಸು,ಸಂತೋಷ ಮತ್ತು ಸಾಮಾಜಿಕ ಸಾಂಸ್ಕೃತಿಕ ಮೌಲ್ಯಗಳು ಮಗುವಿಗೆ ಪೂರಕವಾಗುತ್ತವೆ ಎಂದು ನುಡಿದರು.

ತಾಲೂಕುಕ್ಷೇತ್ರಶಿಕ್ಷಣಾಧಿಕಾರಿಗಳಾದ ವೈ.ಎಸ್.ಹರಗಿಮಾತನಾಡಿಮಗುವಿನ ಮೌಲ್ಯ ಶಿಕ್ಷಣ ಪ್ರಾರಂಭವಾಗುವುದು ಮನೆಯಿಂದಲೆ,ಮೌಲ್ಯ ಶಿಕ್ಷಣ-ಕ್ಕೆ ಪೋಷಕರ ಪಾತ್ರ ಜೊತೆಗೆ ಜವಾಬ್ದಾರಿ ಬಹುಮುಖ್ಯವಾಗಿದೆ. ಮಕ್ಕಳಲ್ಲಿ ಮೌಲ್ಯದ ಮಹತ್ವವನ್ನು ಹರಡಲು ಶಾಲೆಗಳಲ್ಲಿ ಹಲವಾರು ವಿಧಾನಗಳಿವೆ ಮೌಲ್ಯ ಮತ್ತು ಅದರ ಫಲಿತಾಂಶದ ಪ್ರಾಮುಖ್ಯತೆ ಒದಗಿಸುವುದು ಪ್ರಾಥಮಿಕ ಶಿಕ್ಷಣ ಎಂದು ನುಡಿದರು. ಹೊತಪೇಟ ಕೈಲಾಸ ಮಠದ ಶಿವಲಿಂಗ ಸ್ವಾಮಿಗಳು ಈ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿದ್ದರು,ಭಾರತಿ ದರ್ಶನಾಪುರ ಕಾರ್ಯಕ್ರಮ ಉದ್ಘಾಟಿಸಿದರು,ಈ ಸಮಾರಂಭದ ವೇದಿಕೆಯ ಮೇಲೆ ವಿಶ್ವನಾಥರೆಡ್ಡಿ ದರ್ಶನಾಪುರ, ಡಾ.ಶರಣುಗದ್ದುಗೆ,ಗಣಪತರಾವ್ ಜೋಳದ, ಖಾಸಗಿ ಶಾಲೆಗಳ ಒಕ್ಕೂಟದ ಅಧ್ಯಕ್ಷರಾದ ಆರ್. ಚೆನ್ನಬಸು ವನದುರ್ಗ ಜಿಲ್ಲಾ ನೌಕರರ ಸಂಘದ ಅಧ್ಯಕ್ಷ



ರಾಯಪ್ಪಗೌಡ ಹುಡೇದ,ತಾಲೂಕು ಕುರುಬರ ಸಂಘದ ಅಧ್ಯಕ್ಷ ಎಲ್ಲಪ್ಪ ನರಿ,ದೊರೆಗುಡ್ಡ ಮುರಾರ್ಜಿ ವಸತಿ ಶಾಲೆಯ ಪ್ರಾಂಶುಪಾಲರಾದ ಶರಣು ನಾಯ್ಕಲ್,ಮೌನೇಶ್ ಹಳಿಸಗರ,ಜೆಟ್ಟಪ್ಪ ಹದನೂರ ಪ್ರಧಾನೆಪ್ಪ ಹೆಗ್ಗನದೊಡ್ಡಿ,ಶ್ರೀಶೈಲ ಹೆಗ್ಗಣದೊಡ್ಡಿ,ಸೇರಿದಂತೆ ಇತರರು ಉಪಸ್ಥಿತರಿದ್ದರು ಸಂಸ್ಥೆಯ ಅಧ್ಯಕ್ಷರಾದ ಮಡಿವಾಳಪ್ಪ ಪಾಟೀಲ್ ಹೆಗ್ಗಣದೊಡ್ಡಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಕೊಂಡಿದ್ದರು. ಶಾಲೆಯ ಶಿಕ್ಷಕಿ ವೃಂದದವರಾದ ವಿಜಯಲಕ್ಷ್ಮಿ ಪುರಾಣಿಕ, ಸವಿತಾ ಮೇಡಂ, ನಾಜಿಮ ಮೇಡಂ ಅಕ್ಷತಾ ಮೇಡಂ, ಶ್ರೇಯಾ ಮೇಡಂ,ರಾಶಿ ಮೇಡಂ,ಮಾಣಿಕ್ಯ ಮೇಡಂ, ಶರಣಮ್ಮ ಮೇಡಂ, ಹಾಜರಿದ್ದರು. ಈ ಸಂದರ್ಭದಲ್ಲಿ ನಾಡಿನ ಸಾಧಕರಿಗೆ ಪ್ರಶಸ್ತಿ ಪ್ರದಾನ ಸಮಾರಂಭ ಜರಗಿತು *ಪ್ರಶಸ್ತಿ ಪಡೆದ ಗಣ್ಯರು ಪತ್ರಿಕಾ ಕ್ಷೇತ್ರದಿಂದ, ನಾರಾಯಣಾಚಾರ್ಯ ಸಗರ, ಉದ್ಯಮ ಕ್ಷೇತ್ರದಿಂದ ಬಸನಗೌಡ ಕಂಚನಕಾವಿ, ಉದ್ಯಮ ಕ್ಷೇತ್ರದಿಂದ ರಾಜು ಆನೆಗುಂದಿ, ಸಹಕಾರ ಕ್ಷೇತ್ರದಿಂದ ಮಲ್ಲಿಕಾರ್ಜುನ ರಡ್ಡಿ ಅಮ್ಮಪೂರ, ಸಮಾಜ ಸೇವೆ ಕ್ಷೇತ್ರದಿಂದ ಕೃಷ್ಣ ರಡ್ಡಿ ಮುದನೂರು, ಸಮಾಜ ಸೇವೆ ಕ್ಷೇತ್ರದಿಂದ ರವಿ ಸೊನ್ನದ,ಸಾಯಿಬಣ್ಣ ಪುರ್ಲೆ, ಧರ್ಮಿಬಾಯಿ ರಾಠೋಡ,ನಾನಗೌಡ ಮೇಟಿ ಸೈದಾಪುರ,ಗೋಡ್ರಿಹಾಳ,ಮಾಳಪ್ಪ ಪೂಜಾರಿ,ವಿಭೂತಿಹಳ್ಳಿ,ಸಿದ್ದರಾಮ ತಳ್ಳಳ್ಳಿ*,*ನಂತರ ಪುಟಾಣಿ ಮಕ್ಕಳಿಂದ ಹಲವಾರು ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಈ ಸಂದರ್ಭದಲ್ಲಿ, ತಿಪ್ಪಣ್ಣ ಕ್ಯಾತನಾಳ ಸ್ವಾಗತಿಸಿದರು,ಶರಣಗೌಡ ಪೊಲೀಸ್ ಬಿರಾದಾರ್ ಪ್ರಾಸ್ತಾವಿಕವಾಗಿ ಮಾತನಾಡಿದರು ಬಸವರಾಜ ಶಿನ್ನೂರ ನಿರೂಪಿಸಿದರು, ಸೌಮ್ಯ ಕುಲಕರ್ಣಿ ಪ್ರಾರ್ಥಿಸಿದರು,ಶರಣು ಕಾಡಮ ಗೇರಿ ವಂದಿಸಿದರು.

# ಹೆಪಟೈಟೀಸ್-ಬಿ ಸೋಂಕಿನ ಲಕ್ಷಣಗಳಿಗೆ ಚಿಕಿತ್ಸೆಯಿದ್ದು, ನಿರ್ಲಕ್ಷಿಸಬೇಡಿ: ಡಾ.ಶಕೀಲಾ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.07:ಯಕೃತ್ತಿನ ಮೇಲೆ ಪರಿಣಾಮ ಬೀರುವ ಹೆಪಟೈಟೀಸ್-ಬಿ ಒಂದು ವೈರಸ್ ಸೋಂಕಾಗಿದ್ದು,ಗಾಢವಾದ ಮೂತ್ರದ ಬಣ್ಣದಲ್ಲಿ ಬದಲಾವಣೆ,ವಾಕರಿಕೆ ಮುಂತಾದವುಗಳು ಕಂಡುಬಂದಲ್ಲಿ ಹತ್ತಿರದ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಮೂಲಕ ಆರಂಭದಲ್ಲಿಯೇ ರೋಗ ನಿಯಂತ್ರಣಕ್ಕೆ ಸಹಕರಿಸಿ ಎಂದು ರಾಷ್ಟ್ರೀಯ ವೈರಲ್ ಹೈಪಟೈಟೀಸ್ ನಿಯಂತ್ರಣ ಕಾರ್ಯಕ್ರಮದ ಉಪನಿರ್ದೇಶಕರಾದ ಡಾ.ಶಕೀಲಾ. ಎನ್ ಅವರು ಹೇಳಿದರು.



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ನಿರ್ದೇಶನಾಲಯದಡಿ ರಾಷ್ಟ್ರೀಯ ವೈರಲ್ ಹೆಪಟೈಟೀಸ್ ನಿಯಂತ್ರಣ ಕಾರ್ಯಕ್ರಮದ ಮೂಲಕ ಕಲಬುರಗಿ ವಿಭಾಗದ ಎಲ್ಲಾ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸುವ ಕ್ಷಯರೋಗ ನಿರ್ಮೂಲನಾ ಅಧಿಕಾರಿಗಳು, ಫಿಜಿಷಿಯನ್, ತಜ್ಞ ವೈದ್ಯರುಗಳಿಗೆ ಬಳ್ಳಾರಿ ನಗರದಲ್ಲಿ ಹಮ್ಮಿಕೊಂಡಿದ್ದ ಎರಡು ದಿನಗಳ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸಾಮಾನ್ಯವಾಗಿ ಕಾಮಾಲೆ ಎಂದು ಕರೆಸಿಕೊಳ್ಳುವ ಹೆಪಟೈಟೀಸ್-ಬಿ ಸೋಂಕು ಆರಂಭದಲ್ಲಿ ಚಿಹ್ನೆಗಳನ್ನು ಗುರ್ತಿಸಲು ಸಾಧ್ಯವಾಗುವುದಿಲ್ಲ. ಕ್ರಮೇಣ ಚರ್ಮ ಮತ್ತು ಕಣ್ಣುಗಳ ಹಳದಿ, ಗಾಢ ಮೂತ್ರ, ತೀವ್ರ ಆಯಾಸ, ವಾಕರಿಕೆ, ವಾಂತಿ ಸ್ನಾಯು ಮತ್ತು ಕೀಲು ನೋವು, ಹಸಿವಾಗದಿರುವಿಕೆ,ಹೊಟ್ಟೆ ಬಲಭಾಗದಲ್ಲಿ ನೋವು ಕಾಣಿಸಿಕೊಳ್ಳುತ್ತಿದ್ದು, ಈ ಹಂತದಲ್ಲಿಯೂ ನಿರ್ಲಕ್ಷಿಸಿದರೆ ಗಂಭೀರ ಸ್ಥಿತಿಗೆ ರೋಗಿಯ ಆರೋಗ್ಯ ಬದಲಾಗಬಹುದು. ಇದಕ್ಕಾಗಿ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ತಪಾಸಣೆ ಮತ್ತು ಪರೀಕ್ಷೆ ಕೈಗೊಳ್ಳಲಾಗುತ್ತಿದ್ದು, 2030 ರ ವೇಳೆಗೆ ಹೆಪಟೈಟೀಸ್ ಮುಕ್ತ ದೇಶವನ್ನಾಗಿಸುವ ಕಾರ್ಯಕ್ಕೆ ಎಲ್ಲರೂ ಕೈಜೋಡಿಸಿ ಕರ್ತವ್ಯ ನಿರ್ವಹಿಸಬೇಕು ಎಂದರು. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್ ಬಾಬು ಅವರು ಮಾತನಾಡಿ, ಸಾಮಾನ್ಯವಾಗಿ ಹೆಪಟೈಟೀಸ್-ಬಿ ಸೋಂಕು ಹೊಂದಿದ ವ್ಯಕ್ತಿಯ ರಕ್ತ ಮತ್ತು ಇತರ ದೈಹಿಕ ದ್ರವಗಳು ಇನ್ನೊಬ್ಬ ವ್ಯಕ್ತಿಯ ದೇಹದಲ್ಲಿ ಸೇರಿದ ಸಂದರ್ಭದಲ್ಲಿ ರೋಗ ಹರಡುವ ಸಾಧ್ಯತೆ ಇದ್ದು, ಶುದ್ಧೀಕರಿಸದ ಸೂಜಿ, ಸಿರಂಜ್‌ಗಳು ಹಲ್ಲು ಉಜ್ಜುವ ಬ್ರಶ್, ಉಗುರು-ಕತ್ತರಿಗಳು, ಹಚ್ಚೆ ಹಾಕಿಸಿಕೊಳ್ಳುವುದು, ಸೋಂಕಿತ ವ್ಯಕ್ತಿಯ ನಿರಂತರ ಸಂಪರ್ಕವಿರುವ ಕುಟುಂಬದ ಸದಸ್ಯರು ಸೋಂಕಿಗೆ ತುತ್ತಾಗುವ ಸಾಧ್ಯತೆಯಿದೆ ಎಂದು ತಿಳಿಸಿದರು. ಈ ನಿಟ್ಟಿನಲ್ಲಿ ಎಲ್ಲಾ ಗರ್ಭಿಣಿಯರಿಗೆ ಕಡ್ಡಾಯ ಹೆಪಟೈಟೀಸ್-ಬಿ ತಪಾಸಣೆ, ನವಜಾತ ಶಿಶು ಮತ್ತು 1 ವರ್ಷದ ಮಕ್ಕಳಿಗೆ ಲಸಿಕೆ ಹಾಕಿಸುವುದು, ಹೆಚ್ಚು ಅಪಾಯಕಾರಿ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುವ ಆರೋಗ್ಯ ಕಾರ್ಯಕರ್ತೆಯರು ತಪ್ಪದೇ ಲಸಿಕೆ ಪಡೆಯಬೇಕು ಎಂದು ಸೂಚಿಸಿದರು. ನಾವು ಬಳಸುವ ಶೌಚಾಲಯ, ಕುಡಿಯುವ ನೀರು ಮುಂತಾದವುಗಳ ನೈರ್ಮಲ್ಯ ಕಾಪಾಡಿಕೊಳ್ಳಬೇಕು. ರಕ್ತ ಮತ್ತು ಅದರ ಉತ್ಪನ್ನ ಪಡೆಯುವಾಗ ಸುರಕ್ಷತೆಯನ್ನು ಪರಿಶೀಲಿಸಿಕೊಳ್ಳಬೇಕು. ಇದರಿಂದ ನಮ್ಮ ಜೀವನ ಶೈಲಿ ಹಾಗೂ ಬದಲಾವಣೆಗಳ ಮೂಲಕ ಹೆಪಟೈಟೀಸ್ ಕಾಯಿಲೆಯನ್ನು ತಡೆಗಟ್ಟಬಹುದಾಗಿದೆ ಎಂದು ತಿಳಿಸಿದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ..ಇಂದ್ರಾಣಿ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಬಿಮ್ಸ್ ನಿರ್ದೇಶಕ ಡಾ.ಬಿ.ಗಂಗಾಧರ ಗೌಡ, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್ ಬಸರೆಡ್ಡಿ, ಎನ್.ವಿ.ಹೆಚ್. ಸಿ.ಪಿ ಸಲಹೆಗಾರರಾದ ಡಾ.ಹರ್ಷಿತಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ, ಡಿಪಿಸಿ ಅರ್ಚನಾ, ಡ್ಯಾಪ್ಕೋ ಮೇಲ್ವಿಚಾರಕ ಗಿರೀಶ್, ಪಿಪಿಸಿ ಅನಿಲ್ ಕುಮಾರ್, ಆರೋಗ್ಯ ನಿರೀಕ್ಷಣಾಧಿಕಾರಿ ಪಂಪಾಪತಿ ಸೇರಿದಂತೆ 7 ಜಿಲ್ಲೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಇಂದು ರಾಷ್ಟ್ರೀಯ ಲೋಕ್ ಅದಾಲತ್

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.07-ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರ ಮತ್ತು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ಇವರ ನಿರ್ದೇಶನದಂತೆ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರವತಿಯಿಂದ ಮಾ.08 ರಂದು ನಗರದ ತಾಳೂರು ರಸ್ತೆಯ ಹೊಸ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ನಡೆಸಲಾಗುವುದು ಎಂದು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ತಿಳಿಸಿದ್ದಾರೆ. ಸಾರ್ವಜನಿಕರು ತಮ್ಮ ವ್ಯಾಜ್ಯಪೂರ್ವ, ರಾಜಿಯಾಗಬಹುದಾದ ಅಪರಾಧಿಕ ಪ್ರಕರಣಗಳು, ಬ್ಯಾಂಕ್ ಪ್ರಕರಣಗಳು, ಮೋಟಾರು ವಾಹನ ಅಪಘಾತ ಪರಿಹಾರ ನ್ಯಾಯಾಧೀಕರಣದ ಪ್ರಕರಣಗಳು,ವೈವಾಹಿಕ ಹಾಗೂ ಕೌಟುಂಬಿಕ ಪ್ರಕರಣಗಳು, ಸಿವಿಲ್ ಪ್ರಕರಣಗಳು ಹಾಗೂ ಇತರೆ ರಾಜಿಯಾಗಬಹುದಾದ ಪ್ರಕರಣಗಳನ್ನು ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಒಟ್ಟು 31 ನ್ಯಾಯಾಲಯಗಳಲ್ಲಿ ಮಾ.08 ರಂದು ನಡೆಯುವ ಮೆಗಾ-ಲೋಕ್ ಅದಾಲತ್ ಮೂಲಕ ಶೀಘ್ರವೇ ಇತ್ಯರ್ಥಗೊಳಿಸಿ ಪರಿಹಾರ ಪಡೆದುಕೊಳ್ಳಲು ಸುವರ್ಣ ಅವಕಾಶವಾಗಿದೆ. ಸಾರ್ವಜನಿಕರು ಹಾಗೂ ಕಕ್ಷಿದಾರರು ಇದರ ಪ್ರಯೋಜನ ಪಡೆದು-ಕೊಂಡು ತಮ್ಮ ವಿವಾದಗಳನ್ನು ಅಂತ್ಯಗೊಳಿಸಬಹುದು ಎಂದು ಅವರು ತಿಳಿಸಿದ್ದಾರೆ.

ರಾಷ್ಟ್ರೀಯ ಲೋಕ್ ಅದಾಲತ್ ಅಂಗವಾಗಿ ಪ್ರತಿದಿನ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಯ ಒಟ್ಟು 31 ನ್ಯಾಯಾಲಯಗಳಲ್ಲಿ ಪೂರ್ವಭಾವಿ ಬೈಠಕ್‌ಗಳು ನಡೆಯುತ್ತಲಿವೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಕಚೇರಿ ಅಥವಾ ದೂ.08392-278077 ಗೆ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಕಿವಿಮಾತು ಉದ್ಯೋಗಾಕಾಂಕ್ಷಿಗಳಲ್ಲಿ ನಿರಂತರ ಪ್ರಯತ್ನ ಇರಲಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.07-ಉದ್ಯೋಗಾಕಾಂಕ್ಷಿಗಳಲ್ಲಿ ಕ್ರಿಯಾಶೀಲ ಮನೋಭಾವ, ಸ್ಪರ್ಧಾತ್ಮಕ ಮನಸ್ಸು ಹಾಗೂ ನಿರಂತರ ಪ್ರಯತ್ನ ಇದ್ದಲ್ಲಿ ಉದ್ಯೋಗ ಪಡೆದುಕೊಳ್ಳುವುದರ ಮೂಲಕ ಬದುಕು ರೂಪಿಸಿಕೊಳ್ಳಬಹುದು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ಜಿಲ್ಲಾಡಳಿತ,ಜಿಲ್ಲಾ ಪಂಚಾಯತ್, ಕೌಶಲ್ಯಾಭಿವೃದ್ಧಿ,ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮ ಬೆಂಗಳೂರು, ಜಿಲ್ಲಾ ಕೌಶಲ್ಯ ಮಿಷನ್ ಇವರ ಸಂಯುಕ್ತಾಶ್ರಯದಲ್ಲಿ ನಗರದ ಶ್ರೀಮತಿ ಸರಳಾದೇವಿ ಸತೀಶ್ಚಂದ್ರ ಅಗರವಾಲ್ ಸರ್ಕಾರಿ ಪ್ರಥಮ ದರ್ಜೆ (ಸ್ವಾಯತ್ತ) ಕಾಲೇಜಿನಲ್ಲಿ ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್, ಡಿಡಿಯುಜಿಕೆವೈ ಯೋಜನೆಯಡಿ ಬುಧವಾರ ಆಯೋಜಿಸಿದ್ದ ಜಿಲ್ಲಾ ಮಟ್ಟದ ಉದ್ಯೋಗ ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಯುವಪೀಳಿಗೆಯು ಉದ್ಯೋಗ ಪಡೆದುಕೊಳ್ಳುವುದಷ್ಟೇ ಅಲ್ಲದೇ ಉದ್ಯಮ ಸ್ಥಾಪನೆಗೂ ಅಡಿಪಾಯ ಹಾಕಬೇಕು. ಈ ಮೂಲಕ ಇತರರಿಗೂ ಉದ್ಯೋಗ ನೀಡುವಂತವರಾಗಬೇಕು ಎಂದು ಆಶಿಸಿದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹ್ಯಾರೀಸ್ ಸುಮೈರ್ ಅವರು ಮಾತನಾಡಿ,ಬದುಕಿನಲ್ಲಿ ಉತ್ತಮ ಸಾಧಕರಾಗಲು ಕಠಿಣ ಪರಿಶ್ರಮ, ಸಂವಹನ ಕಲೆ, ಭಾಷೆಯ ಮೇಲೆ ಉತ್ತಮ ಹಿಡಿತ ಸಾಧಿಸುವ ಗುಣ ಮೈಗೂಡಿಸಿಕೊಳ್ಳುವುದು ಅವಶ್ಯಕ ಎಂದು ಕರೆ ನೀಡಿದರು.

ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಸ್ಕಿಲ್ ಕನೆಕ್ಟ್ ಕುರಿತ ವ್ಯಾಪಕ ಪ್ರಚಾರ ಕೈಗೊಂಡು, ಅರಿವು ಮೂಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಪ್ರಾಣೇಶ್ ಅವರು ಪ್ರಾಸ್ತಾವಿಕವಾಗಿ ಮಾತನಾಡಿ, ನಿರುದ್ಯೋಗಿ ಯುವಕ ಯುವತಿಯರಿಗೆ ಕೌಶಲ್ಯಾಧಾರಿತ ತರಬೇತಿ ನೀಡಿ ಉದ್ಯೋಗ ಮೇಳಗಳ ಆಯೋಜಿಸುವ ಮೂಲಕ ಉದ್ಯೋಗ ಪಡೆಯಲು ಅವಕಾಶ ಕಲ್ಪಿಸಿಕೊಡುವುದು ಇಲಾಖೆಯ ಉದ್ದೇಶವಾಗಿದೆ ಎಂದು ತಿಳಿಸಿದರು.

ಪ್ರತಿ ಉದ್ಯೋಗ ಮೇಳದಲ್ಲಿ ನಿರುದ್ಯೋಗ ಯುವಕ ಮತ್ತು ಯುವತಿಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಉದ್ಯೋಗ ಮೇಳದ ಸದುಪಯೋಗಪಡೆದುಕೊಳ್ಳಬೇಕು ಎಂದರು.

ಉದ್ಯೋಗ ಮೇಳದಲ್ಲಿ ಒಟ್ಟು 48 ಕಂಪನಿಗಳು ಭಾಗವಹಿಸಿದ್ದವು. ಮೇಳದಲ್ಲಿ ಒಟ್ಟು 2,749 ಅಭ್ಯರ್ಥಿಗಳು ನೋಂದಣಿ ಮಾಡಿಕೊಂಡಿದ್ದರು. ಅದರಲ್ಲಿ 1,146 ಉದ್ಯೋಗಾಕಾಂಕ್ಷಿಗಳು ಭಾಗವಹಿಸಿದ್ದು, 281 ಅಭ್ಯರ್ಥಿಗಳು ಆಯ್ಕೆಗೊಂಡಿ-ದ್ದಾರೆ. 551 ಅಭ್ಯರ್ಥಿಗಳನ್ನು ಕಾಯ್ದಿರಿಸಲಾಗಿದೆ.

ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ವಾಗೀಶ್ ಶಿವಾಚಾರ್ಯ, ಜಿಪಂ ಯೋಜನಾ ನಿರ್ದೇಶಕ ವಿನೋದ್, ಎನ್‌ಆರ್‌ಎಲ್‌ಎಂ ನ ಡಿಪಿಎಂ ರಾಜೇಂದ್ರ, ಸಸಅ ಕಾಲೇಜಿನ ಪ್ರಾಚಾರ್ಯರಾದ ಡಾ.ಪ್ರಹ್ಲಾದ ಚೌದರಿ, ಜಿಲ್ಲಾ ಕೌಶಲ್ಯಾಭಿವೃದ್ಧಿ ಇಲಾಖೆಯ ಸಹಾಯಕ ನಿರ್ದೇಶಕ ವಿಶ್ವನಾಥ್, ಸಹಾಯಕ ಸಾಂಖ್ಯಿಕ ಅಧಿಕಾರಿ ಚಂದ್ರಮ್ಮ, ಜಿಲ್ಲಾ ಅಭಿಯಾನ ವ್ಯವಸ್ಥಾಪಕ ಪ್ರಾಣೇಶ್.ವಿ ಸೇರಿದಂತೆ ಸಿಬ್ಬಂದಿಗಳು ಮತ್ತು ವಿದ್ಯಾರ್ಥಿಗಳು, ಇನ್ನಿತರರು ಉಪಸ್ಥಿತರಿದ್ದರು.

## ಕಂಪ್ಲಿ: ವಿದ್ಯುತ್ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.07-ಕಂಪ್ಲಿ ಜೆಸ್ಕಾಂ ವ್ಯಾಪ್ತಿಯಲ್ಲಿ ಕಂಪ್ಲಿ-ಹೊಸಪೇಟೆ ರಸ್ತೆ ಅಗಲೀಕರಣ, ವಿದ್ಯುತ್ ಮಾರ್ಗಗಳ ಸ್ಥಳಾಂತರ ಕಾಮಗಾರಿ ಕಾರ್ಯ ಕೈಗೊಳ್ಳುತ್ತಿರುವುದರಿಂದ ಮಾ.08 ಮತ್ತು 09 ರಂದು ಬೆಳಿಗ್ಗೆ 09 ಗಂಟೆಯಿಂದ ಸಂಜೆ 05 ಗಂಟೆಯವರೆಗೆ ನಂ.10 ಮುದ್ದಾಪುರ, ಕಣಿವೆ ತಿಮ್ಮಾಪುರ, ರಾಮಸಾಗರ, ಎಲ್ಲಮ್ಮ ಕ್ಯಾಂಪ್ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಹಾಗೂ ಈ ವ್ಯಾಪ್ತಿಯ ಐಪಿ ಸೆಟ್ ಮಾರ್ಗಗಳಲ್ಲಿ ಬೆಳಿಗ್ಗೆ 4 ಗಂಟೆಯಿಂದ ವಿದ್ಯುತ್ ಸರಬರಾಜು ಮಾಡಲಾಗುವುದು. ಸಾರ್ವಜನಿಕರು ಹಾಗೂ ವಿದ್ಯುತ್ ಗ್ರಾಹಕರು ಸಹಕರಿಸಬೇಕು ಎಂದು ಕಂಪ್ಲಿ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ತಿಳಿಸಿದ್ದಾರೆ.

### ಜೇವರ್ಗಿಯಲ್ಲಿ ಕಲ್ಯಾಣ ಪಥ ಯೋಜನೆಯ

## ಪ್ರಾರಂಭೋತ್ಸವ ಕಾರ್ಯಕ್ರಮ: ಸಾರಿಗೆ ಸೇವೆಯಲ್ಲಿ ವ್ಯತ್ಯಯ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮಾ.07-ಜೇವರ್ಗಿಯಲ್ಲಿ ಮಾರ್ಚ್ 8 ರಂದು ಶನಿವಾರ ಜರುಗಲಿರುವ ಕಲ್ಯಾಣ ಪಥ ಯೋಜನೆಯ ಪ್ರಾರಂಭೋತ್ಸವದ ಕಾರ್ಯಕ್ರಮಕ್ಕೆ ಸುಮಾರು 50 ಸಾರಿಗೆ ಬಸ್‌ಗಳನ್ನು ಕರಾರು ಒಪ್ಪಂದದ ಮೇಲೆ ನೀಡಲಾಗುತ್ತಿದೆ. ಇದರ ಹಿನ್ನೆಲೆಯಲ್ಲಿ ಅಂದು ಬೆಳಿಗ್ಗೆ 8 ರಿಂದ ಸಂಜೆ 4 ಗಂಟೆಯವರೆಗೆ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ ಕಲಬುರಗಿ ವಿಭಾಗ-2 ರಿಂದ ಕಾರ್ಯಾಚರಣೆಯಾಗುವ ಬಸ್‌ಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಲಿದೆ.

## ಬೆಳಕೇರಾ ಬೆಟ್ಟದ ರೇವಣ್ಣಸಿದ್ದೇಶ್ವರ 16 ಜಾತ್ರಾ ಮಹೋತ್ಸವ

ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ತಾಲೂಕಿನ ಬೆಳಕೇರಾ ಬೆಟ್ಟದ ಶ್ರೀ ರೇವಣಸಿದ್ದೇಶ್ವರ 16ನೇ ಜಾತ್ರಾ ಮಹೋತ್ಸವ ಮಾರ್ಚ್ 11 ರಿಂದ ಆರಂಭವಾಗಿ ಮಾರ್ಚ್ 12ರ ವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರಗಲಿವೆ ಎಂದು ಪಂಚ ಕಮಿಟಿ ಅವರು ತಿಳಿಸಿದ್ದಾರೆ. ಮಾರ್ಚ್ 11ರಂದು ಬೆಳಿಗ್ಗೆ ಜಗತ್ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ಮೂರ್ತಿಗೆ ರುದ್ರಾಭಿಷೇಕ ಗ್ರಾಮದ ಶ್ರೀ ನಂದಿ ಬಸವೇಶ್ವರ ದೇವಸ್ಥಾನದಿಂದ ಕಳಸ



ಹಾಗೂ ಪಲ್ಲಕ್ಕಿ ಮೆರವಣಿಗೆ ಮತ್ತು ಬೆಳಗ್ಗೆ 10 ಗಂ-ಟೆಗೆ ಪಂಚಾಚಾರ್ಯರ ಧ್ವಜಾರೋಹಣ ಹಾಗೂ ರಥದ ಕಳಸರೋಹಣ ಜರುಗುವುದು. ಮಾರ್ಚ್ 12ರಂದು ಬೆಳಿಗ್ಗೆ 7 ಗಂಟೆಗೆ ಶ್ರೀ ಜಗದ್ಗುರು ರೇವಣಸಿದ್ದೇಶ್ವರ ಮೂರ್ತಿಗೆ ಸಂಗೀತ, ರುದ್ರಾಭಿಷೇಕ, ಬೆಳಿಗ್ಗೆ 9 ಘಂಟೆಗೆ ಜಂಗಿ ಕುಸ್ತಿ, ಮಧ್ಯಾಹ್ನ 3:00 ಗಂ-ಟೆಗೆ ಧರ್ಮಸಭೆ ನಂತರ 4 ಗಂಟೆಗೆ ಶ್ರೀ ಜಗದ್ಗುರು ರೇವಣಸಿದ್ದೇಶ್ವರರ ಭವ್ಯ ಪಲ್ಲಕ್ಕಿ ಉತ್ಸವ ಹಾಗೂ ಸಾಯಂಕಾಲ 5:30ಕ್ಕೆ ಮಹಾರಥೋತ್ಸವ ಜರುಗುತ್ತದೆ. ರಾತ್ರಿ 8: 30ಕ್ಕೆ ನಗೆ ಹಬ್ಬ ಕಾರ್ಯಕ್ರಮ ಜರುಗುತ್ತದೆ ಎಂದು ಬೆಟ್ಟದ ಶ್ರೀ ಜಗದ್ಗುರು ರೇವಣ್ಣಸಿದ್ದೇಶ್ವರ್ ಜಾತ್ರಾ ಮಹೋತ್ಸವ ಸೇವಾ ಸಮಿತಿ ಅವರು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮುಸ್ತರಿ; ಪಿಕೆಪಿಎಸ್ ಅಧ್ಯಕ್ಷರಾಗಿ ಈಶ್ವರ ಜಕ್ಕಾ ಉಪಾಧ್ಯಕ್ಷರಾಗಿ ಗೋಪಾಲರೆಡ್ಡಿ ಅವಿರೋಧ ಆಯ್ಕೆ




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:- ತಾಲೂಕಿನ ಮುಸ್ತರಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷರಾಗಿ ಈಶ್ವರ ತಂದೆ ಶಾಮರಾವ ಜಕ್ಕಾ ಉಪಾಧ್ಯಕ್ಷರಾಗಿ ಗೋಪಾಲರೆಡ್ಡಿ ತಂದೆ ಹಣಮಂತರೆಡ್ಡಿ ಅವಿರೋಧವಾಗಿ ಆಯ್ಕೆಯಾದರು. ಶುಕ್ರವಾರ ಪಿಕೆಪಿಎಸ್ ಕಾರ್ಯಾಲಯದಲ್ಲಿ ಜರುಗಿದ. ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಸ್ಥಾನಕ್ಕೆ ಬಬ್ಬರೆ ನಾಮಪತ್ರ ಸಲ್ಲಿಸಿದರಿಂದ ಅವಿರೋಧವಾಗಿ ಮಾಡಲಾಗಿದೆ ಎಂದು ಚುನಾವಣಾಧಿಕಾರಿ ರಮೇಶ ಸಲಗರ್ ತಿಳಿಸಿದರು. ನಂತರ ಮುಖ್ಯ ಕಾರ್ಯನಿರ್ವಾಹಕ ಉದಯಕುಮಾರ ತಂಗಾ ನೂತನ ಅಧ್ಯಕ್ಷ ಉಪಾಧ್ಯಕ್ಷ ಹಾಗೂ ಸರ್ವ ಸದಸ್ಯರನ್ನು ಶಾಲು ಹೊದಿಸಿ ಸನ್ಮಾನಿಸಿದರು. ನೂತನ ಅಧ್ಯಕ್ಷ ಈಶ್ವರ ಜಕ್ಕಾ ಮಾತನಾಡಿ, ಸೇವೆ ಮಾಡಲು ನನಗೆ ಅವಕಾಶ ಕಲ್ಪಿಸಿಕೊಟ್ಟ ರೈತರಿಗೆ ಧನ್ಯವಾದಗಳು ಸಲ್ಲಿಸುತ್ತನೆ. ರೈತರ ಏಳಿಗೆಗಾಗಿ ಏನು ಮಾಡಬೇಕು ಎಂಬುದನ್ನು ಯೋಜನೆ ಹಾಕಿಕೊಂಡು ಕಾರ್ಯರೂಪಕ್ಕೆ ತರಲಾಗುತ್ತದೆ. ಅಲ್ಲದೆ ರೈತರ ಮತ್ತು ವ್ಯಾಪಾರಸ್ಥರ ಉತ್ತೇಜನಕ್ಕೆ ಪ್ರಯತ್ನ ಮಾಡುತ್ತೇನೆ, ಸರ್ಕಾರದಿಂದ ಬರುವ ಸೌಲಭ್ಯಗಳನ್ನು ರೈತರ ಮನೆಗೆ ಮುಟ್ಟಿಸುವ ಕಾರ್ಯ ಮಾಡುತ್ತೇನೆ ಎಂದು ಹೇಳಿದರು. ಈ ಸಂದರ್ಭದಲ್ಲಿ ನಿರ್ದೇಶಕರಾದ ಗಂಗಾಧರ ಇಟಗಾ, ಸತೀಶಕುಮಾರ ಕೌಡಳ, ನೂರಂದಪ್ಪ ಪಾಟೀಲ್, ಅಂಜಮ್ಮ ಸೀಳಾ, ಶ್ರೀದೇವಿ ರಾಚೋಟ್ಟಿ, ಅನೀಲಕುಮಾರ ಹೈಬತ್ತಿ, ನಾಗಶೆಟ್ಟಿ ಸಂಗೋಳಗಿ, ಎಂ.ಡಿ. ಅಹೆಸಾನ ಖತ್ತಿಬ್, ವೀರೇಶ ತುಗಾಂವ, ವೀರಪ್ಪ ತುಗಾಂವ, ಸಿಬ್ಬಂದಿಗಳಾದ ಬಸವರಾಜ ಕಾಮಣಿ, ನಾಗರಾಜ ಹಳ್ಳಿ, ಜೈಶ್ರೀ ಪಾಟೀಲ್ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

## ಇಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.07-ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ನ್ಯಾಯಾಂಗ, ಜಿಲ್ಲಾ ವಕೀಲರ ಸಂಘ ಮತ್ತು ರೀಡ್ಸ್ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ಮಾ.08 ರಂದು ಬೆಳಿಗ್ಗೆ 10 ಗಂಟೆಗೆ ನಗರದ ತಾಳೂರು ರಸ್ತೆಯ ಹೊಸ ಜಿಲ್ಲಾ ನ್ಯಾಯಾಲಯ ಸಂಕೀರ್ಣದಲ್ಲಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರೂ ಆದ ಕೆ.ಜಿ.ಶಾಂತಿ ಅವರು ಕಾರ್ಯಕ್ರಮ ಉದ್ಘಾಟಿಸುವರು. ಕಾರ್ಯಕ್ರಮದಲ್ಲಿ ಎಲ್ಲಾ ಗೌರವಾನ್ವಿತ ನ್ಯಾಯಾಧೀಶರು, ವಕೀಲರ ಸಂಘದ ಅಧ್ಯಕ್ಷರು ಹಾಗೂ ಸರ್ವ ಸದಸ್ಯರು, ನ್ಯಾಯಾಲಯದ ಸಿಬ್ಬಂದಿ ವರ್ಗ, ರೀಡ್ಸ್ ಸಂಸ್ಥೆಯ ಪದಾಧಿಕಾರಿಗಳು, ಸದಸ್ಯರು ಹಾಗೂ ಕಕ್ಷಿದಾರರು ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.

## ಶಿಕ್ಷಕರು ರಾಜಕೀಯಕ್ಕೆ ಹೆಚ್ಚು ಒತ್ತು ನೀಡದೆ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ:- ರಾಜಪ್ಪ ಜಮಾದರ್




ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:-ವಿಧ್ಯಾರ್ಥಿಗಳಲಿ ವಿಜ್ಞಾನದ ಬಗ್ಗೆ ಆಸಕ್ತಿ ಒಡಮೂಡಿಸಲು ಕಲಿಕಾ ಮೇಳ ಸಹಾಯವಾಗಲಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ವೆಂಕಟೇಶ್ ಗುಡಾಳ ಪಟ್ಟಣದ ಸರ್ಕಾರಿ ಕನ್ಯಾ ಮಾದರಿಯ ಪ್ರಾಥಮಿಕ ಶಾಲೆಯಲ್ಲಿ ಸಮೂಹ ಸಂಪನ್ಮೂಲ ಕೇಂದ್ರ ಚಿಟಗುಪ್ಪ ಕನ್ನಡ ಮತ್ತು ಉರ್ದು ಹಾಗೂ ಉಡಬಾಳ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಕ್ಲಸ್ಟರ್ ಮಟ್ಟದ (ಎಫ್‌ಎಲ್‌ಎನ್) ಮಕ್ಕಳ ಕಲಿಕಾ ಹಬ್ಬ ಉದ್ಘಾಟಿಸಿ ಮಾತನಾಡುತ್ತಾ ತಿಳಿಸಿದರು. ಈ ಕಲಿಕಾ ಮೇಳ ವಿದ್ಯಾರ್ಥಿಗಳಿಗೆ ನೋಡಿ ತಿಳಿ ಮಾಡಿ ಕಲಿ ಕಲ್ಪನೆಗೆ ಸಹಾಯವಾಗಿದೆ. ವಿದ್ಯಾರ್ಥಿಗಳು ತಮ್ಮ ಪಠ್ಯ ಪುಸ್ತಕಗಳ ಕಲಿತ ವಿಷಯಗಳು ಕಲಿಕಾಮೇಳದಲ್ಲಿ ಪ್ರದರ್ಶಿಸಿದರು. ಅತ್ಯುತ್ತಮ ಮಾದರಿಗಳನ್ನು ಆಯ್ಕೆ ಮಾಡಿ ಜಿಲ್ಲಾ ಮಟ್ಟಕ್ಕೆ ಕಳುಹಿಸಲಾಗುವುದು ಎಂದರು. ಕಳೆದ ವರ್ಷ ಬೀದರ್ ಜಿಲ್ಲೆಯಲ್ಲಿಯೇ ಹುಮನಾಬಾದ ತಾಲೂಕ ದ್ವಿತೀಯ ಸ್ಥಾನ ಪಡೆದಿದೆ ಈ ವರ್ಷವೂ ಕೂಡ ರಾಜ್ಯದಲೇ ಬೀದರ್ ಜಿಲ್ಲೆಯ ಚಿಟಗುಪ್ಪ ಹುಮನಾಬಾದ ತಾಲೂಕ ಉತ್ತಮ ಫಲಿತಾಂಶ ಬರಲು ವಿದ್ಯಾರ್ಥಿಗಳು ಕಷ್ಟ ಪಟ್ಟು ಅಧ್ಯಯನ ಮಾಡಬೇಕೆಂದು ತಿಳಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ರಾಜಪ್ಪ ಜಮಾದರ್ ಮಾತನಾಡಿ, ಶಿಕ್ಷಕರು ರಾಜಕೀಯಕ್ಕೆ ಹೆಚ್ಚು ಒತ್ತು ನೀಡದೆ ಶಿಕ್ಷಣಕ್ಕೆ ಹೆಚ್ಚು ಒತ್ತು ನೀಡಿ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣ ನೀಡಲು ಹೆಚ್ಚಿನ ಪರಿಶ್ರಮ ವಹಿಸಲು ಮನವಿ ಮಾಡಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ರವೀಂದ್ರರೆಡ್ಡಿ ಮಾಲಿ ಪಾಟೀಲ್ ಮಾತನಾಡಿದರು. ಶಾಲೆಯ ಮುಖ್ಯಗುರುಗಳಾದ ಸುನೀತಾ ಹಮಿಲಪುರಕ್ಕರ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಸಮನ್ವಯ ಅಧಿಕಾರಿ ಪ್ರೀತಮಸಿಂಗ್ ಜಾಧವ್, ಪ್ರೌಢ ಶಾಲಾ ಶಿಕ್ಷಕರ ಸಂಘದ ತಾಲೂಕಾಧ್ಯಕ್ಷ ಅಶೋಕಕುಮಾರ್ ಮಹಿಂದ್ರಕ್ಕರ್, ಸಾವಿತ್ರಿಬಾಯಿ ಫುಲೇ ಶಿಕ್ಷಕಿಯರ ಸಂಘದ ತಾಲೂಕಾಧ್ಯಕ್ಷೆ ಪ್ರಮೀಳಾ ರೆಡ್ಡಿ, ಬಿಆರ್ಪಿ ರಾಮಲು, ಸಿಆರ್ಸಿಗಳಾದ ರಾಮಚಂದ್ರ, ನಾಜಮಿನ್ ಸುಲ್ತಾನ, ವಸೀಮ್ ಸುಲ್ತಾನ, ಅಖಿಲ ಸೇರಿದಂತೆ ವಿವಿಧ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು. ನಂತರ ಶಾಲಾ ಮಕ್ಕಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ರವಿಶೆಟ್ಟಿ ತಂಗಾ ಕಾರ್ಯಕ್ರಮ ನಿರೋಪಿಸಿ ವಂದಿಸಿದರು.

## ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರ ಪ್ರವಾಸ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಮಾ.07-ಆಳಂದ ಶಾಸಕ ಹಾಗೂ ಕರ್ನಾಟಕ ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷರಾದ ಬಿ.ಆರ್. ಪಾಟೀಲ ಅವರು ಮಾರ್ಚ್ 8 ರಂದು ಶನಿವಾರ ಮಧ್ಯಾಹ್ನ 12 ಗಂಟೆಗೆ ಜೇವರ್ಗಿ ತಾಲೂಕಿನ ಕಟ್ಟಿಸಂಗಾವಿಯ ತಾಯಿ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆ ಹತ್ತಿರದಲ್ಲಿ ಕಲಬುರಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕರ್ನಾಟಕ ಗ್ರಾಮೀಣ ರಸ್ತೆ ಅಭಿವೃದ್ಧಿ ಸಂಸ್ಥೆ ಬೆಂಗಳೂರು ಇವರ ವತಿಯಿಂದ ವತಿಯಂದ ಆಯೋಜಿಸಲಾದ ಕಲ್ಯಾಣ ಪಥ ಯೋಜನೆಯ ಪ್ರಾರಂಭೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ನಂತರ ಸಂಜೆ 6 ಗಂಟೆಗೆ ಕಲಬುರಗಿಯಿಂದ ರೈಲಿನ ಮೂಲಕ ಪುಣೆಗೆ ಪ್ರಯಾಣಿಸುವರು.

# ಇಂದು ಮರಾಠಿ ಭಾಷಾ ಪುಸ್ತಕ ಬಿಡುಗಡೆ ಹಾಗೂ ಕವಿಗೋಷ್ಠಿ ಕಾರ್ಯಕ್ರಮ

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ: ಪ್ರತಿ ವರ್ಷದಂತೆ ಈ ವರ್ಷವು ಛತ್ರಪತಿ ಶಿವರಾಯ ಮರಾಠಿ ಸಾಹಿತ್ಯ ಸಂಸ್ಕೃತಿ ಮಂಡಲದ ಪ್ರಥಮ ವಾರ್ಷಿಕೋತ್ಸವ ಹೇಗೂ ಮರಾಠಿ ಭಾಷಾ ಸನ್ಮಾನ ಕಾರ್ಯಕ್ರಮ ಪುಸ್ತಕ ಪ್ರಕಟನೆ ಕಾರ್ಯಕ್ರಮ ಹೇಗೂ ನಾಲ್ಕು ಮರಾಠಿ ಲೇಖಕ ಕವಿಗೋಷ್ಠಿ ಮಾ.8ರಂದು ತಾಲ್ಲೂಕಿನ ಘಾಟಬೋರಳ ಗ್ರಾಮದ ಮಾತೋಶ್ರೀ ಮಲನಾಬಾಯಿ ಜಾಧವ ಪದವಿ ಕಾಲೇಜಿನಲ್ಲಿ ಸಮರೋಪಗೊಳ್ಳಲಿದೆ. ಬೀದರ್ ಜಿಲ್ಲಾ ಪಂಚಾಯತ್ ಉಪಾಧ್ಯಕ್ಷರಾದ ಡಾ.60 ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿರುವ ಪ್ರಕಾಶ ಪಾಟೀಲ್ ಅವರು ಲಾತೂರ್ ಜಿಲ್ಲೆ ಖ್ಯಾತ ಹಿರಿಯ ಸಾಹಿತಿ ಹಗೂ ಕುಂಬಾರರು ಭಾರತ ಸತ್ಪುಟದಲ್ಲಿ ಆಶ್ರಯದಲ್ಲಿ ನಾಲ್ಕು ಮರಾಠಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಗಂಭೀರಾನಂದ ಸೋಮವಂಶಿ ಅವರು ಬರೆದ ತಾತ್ವಿಕ ಲೇಖನವಾದ ಉಂಬರತ ಪುಸ್ತಕ ಮಾತ ಭೀಮರಾವ್ ಶಂಕರರಾವ್ ಗಣೇಶ ಅವರು ಬರೆದ ಸಂತ ಸಾಹಿತ್ಯ ಜ್ಞಾನೇಶ್ವರ ಮೌಳಿ ಪ್ರಸಾದ್ ಮಾಲಿಕ ಪುಸ್ತಕ ಹೇಗೂ ಎಂ. ಕೆ. ಅಕ್ರೆ ಬರೆದ ಸತ್ಯ ಗ್ರಾಮೀಣ ಈ ಪುಸ್ತಕದ ಕಥೆ ಸಾಹಿತಿ ಕ್ರತಿ ಚಾರ್ಯ ಹೇಗೂ ಶ್ರೀ ತಾನಾಜಿ ದತ್ತುರಾವ್ ಸವಾರೆ ಬರೆದಿದ್ದಾರೆ. ಗದ್ಯ ಪದ್ಯ ಡೊಂಗರ ಘಾಟ್



ಪುಸ್ತಕದ ಪ್ರಕಟನೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದ ಅದ್ಯಕ್ಷತೆಯನ್ನ ಪ್ರಾಂಶುಪಾಲ ವೆಂಕಟರಾವ್ ಜಾಧವ್ ವಹಿಸಿದ್ದರು ಹೇಗೂ ಮುಖ್ಯ ಅತಿಥಿಗಳಾದ ಶಿವಸಾಮರಕ್ ಸಮಿತಿಯ ಕಾರ್ಯದರ್ಶಿ ಸತೀಶಕುಮಾರಜಿ ಕಾರಣ ,ಮುಖ್ಯ ಭಾಷಾಕರರಾಗಿ ಹಿರಿಯ ಸಾಹಿತಿ ಶ್ರೀ ಅನಂತ ಕದಂ ಸರ್ ಹೊಲ್ಲುಡ್ಕರ್ ಹಗೂ ಮುಖ್ಯ ಅತಿಥಿಗಳಗೆ ಡಾ.ಜಿ ಜಗತಾಪ್ ಅದ್ಯಕ್ಷ ಛತ್ರಪತಿ ಶಿವಾಜಿ ಮಹಾರಾಜ್ ಮರಾಠ ಅಭಿವೃದ್ಧಿ ನಿಗಮ ಕರ್ನಾಟಕ ಹೇಗೂ ಡಾ. ಜಯಭರತ್ ಭಾಲ್ಕೆ ಎಂ. ಡಿ. ಎನ್ ಶ್ರವಣಶಾಸ್ತ್ರದ ಉಮಾರ್ಗ ಹೇಗೂ ಅಭಿಮನ್ಯು ನಿರ್ಗುಡೆ ಕ್ರಸಬ್ ಸಮಾಜದ ಅದ್ಯಕ್ಷ ಬೀದರ್ ಹೇಗೂ ಶ್ರೀ ಸೂರ್ಯಕಾಂತ ಶಾಸನ್ ರಾಜ್ ಅದ್ಯಕ್ಷ ಅಖಿಲ ಭಾರತೀಯ ಪರಿವರ್ತನ ಮರಾಠಿ ಸಾಹಿತ್ಯ ಪರಿಷತ್ತು ಕರ್ನಾಕ ಹೇಗೂ ಶ್ರೀ ತುಕಾರಾಂಜೀ ಮೊರೆ ಉಪಾಧ್ಯಕ್ಷ ಕರ್ನಾಟಕ ಆರ್ಯ ಸಮಾಜದ ನಿವೃತ್ತ ಪ್ರಾಚಾರ್ಯ ಭಾಲ್ಕಿ ಈ ಗಣ್ಯ ಅತಿಥಿಗಳ ಪ್ರಯೋಜನ ಪಡೆದರು.

ಕಾರ್ಯಕ್ರಮದ ಸ್ವಾಗತ ಭಾಷಣ ಮಾಡಿದ ಡಾ. ಸುಭಾರಾವ್ ಪಾಟೀಲ್ ಮುನ್ನುಡಿ ಹಿರಿಯ ಸಾಹಿತಿ ಭಾನುದಾಸರಾವ್ ಪಾಟೀಲ್ ಸಮಾನ್ಯ ಕಾರ್ಯವನ್ನು ನೆರೆವೆರಿಸಿದ್ದಾರೆ. ಅಂಜಲಿತೈ ಸಹಶಿಕ್ಷಕಿ ತುಕಾರಾಮ ಶೆಡೋಳೆ ಧನ್ಯವಾದ್ ಭಾಷನ ಮದಲಿದ್ದು ಖ್ಯಾತ ಕವಿಗಳಾದ ದತ್ರೇಯ ರಘುನಾಥರಾವ್ ಪವಾರ್ ಬಸವಕಲ್ಯಾಣ, ಪ್ರದೀಪ್ ನಾಯ್ಕ ಚಿಡಗುಪ್ಪಾ, ಆನಂದ ಜಾಧವ–ಘಾಟ್ ಬೋರಲ್, ರಂಜಿತ್ ಶಿಂಧೆ–ಬೆಲ್ಕುಣಿ, ಶ್ರೀಮತಿ. ಅನಿತಾ ಗಾದೆ–ಉಮಾರ್ಗ, ಶ್ರೀ ರವಿದಾಸ ಕಾಂಬಳೆ–ಕುರುಪ್ ಫೇಳಗಿ, ಶ್ರೀ ಸತೀಶ ಸವಳೆ–ಕಮಲನಗರ, ಶ್ರೀ ಮಲ್ಹಾರಿ ಕಾಂಬಳೆ–ಔರಾದ, ಶ್ರೀ ಅಶೋಕ ಪಾಟೀಲ್ ಚಂದೇಶ್ವರ, ಶ್ರೀ ಕೇಶವ ಬಿರಾದಾರ್–ಖಾನಾಪುರ, ಶ್ರೀ ವಿಜಯಕುಮಾರ್ ಸಕುಲೆ–ಹುಲ್ಲೂರು, ಮಿಲಿಂದ ಶಿಂಧೆ–ಉದಗಿರ್ ಭಾಗವಹಿಸಿದರು. ಮರಾಠಿ ಭಾಷೆಯನ್ನು ಪ್ರೀತಿಸುವ ಎಲ್ಲ ಸಾಹಿತ್ಯ ಪ್ರೇಮಿಗಳಿಗೆ ಹಾರ್ದಿಕ ಸ್ವಂಗತಾ ಕೆ. ಅಕ್ರೆ., ರಮೇಶ್ ಗಣೇಶ್, ತಾನಾಜಿರಾವ್ ಸವಾರೆ, ಗಂಭೀರರಾವ್ ಸೋಮವಂಶಿ, ಶ್ರೀಮತಿ ಅರ್ಚನಾ ಅಕ್ರೆ ಹಾಗು ಉಪಸ್ಥಿತರಿರುವರು.

# ಕೊಣ್ಣೂರ ಗ್ರಾಪಂ ಅಧ್ಯಕ್ಷೆಯಾಗಿ ಬಸಮ್ಮ ಮಾದರ ಅವಿರೋಧ ಆಯ್ಕೆ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ತಾಲೂಕಿನ ಕೊಣ್ಣೂರ ಗ್ರಾಮ ಪಂಚಾಯತ್ ಇದರ ತೆರವಾದ ಪರಿಶಿಷ್ಟ ಜಾತಿ ಮಹಿಳೆ ಮೀಸಲಾತಿಯ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷೆಯಾಗಿ ಬಸಮ್ಮ ಬಸಪ್ಪ ಮಾದರ ಇವರು ಅವಿರೋಧವಾಗಿ ಆಯ್ಕೆಯಾದರು. ಕೊಣ್ಣೂರ ಗ್ರಾಮ ಪಂಚಾಯತ್ ಸಭಾಂಗಣದಲ್ಲಿ ಶುಕ್ರವಾರ ನಡೆದ ಈ ಚುನಾವಣೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಶ್ರೀಮತಿ ಬಸಮ್ಮ ಬಸಪ್ಪ ಮಾದರ ಅವರೊಬ್ಬರೇ ನಾಮಪತ್ರ ಸಲ್ಲಿಸಿದ್ದರಿಂದ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿಯೂ ಆದ ತಾಪಂ ಇಒ ನಿಂಗಪ್ಪ ಮಸಳಿ ಘೋಷಿಸಿದರು. ಸಹಾಯಕ ಚುನಾವಣಾಧಿಕಾರಿ ತಾಪಂ ನ ಬಸನಗೌಡ ಚೌಧರಿ, ಮಹಾಂತಗೌಡ ದೊರೆಗೋಳ, ಪಿಡಿಒ ಶ್ರೀಮತಿ ಎಸ್.ಎಸ್. ಬಿರಾದಾರ, ಕಾರ್ಯದರ್ಶಿ ಪಿ.ಎ.ಕರಾಟೆ ಕಾರ್ಯನಿರ್ವಹಿಸಿದರು. ಒಟ್ಟು 16 ಜನ ಸದಸ್ಯ ಬಲ ಹೊಂದಿರುವ ಈ ಪಂಚಾಯತ್ ನ ಅಧ್ಯಕ್ಷ ಸ್ಥಾನದ ಚುನಾವಣೆಯಲ್ಲಿ 12 ಜನ ಸದಸ್ಯರು ಭಾಗವಹಿಸಿದ್ದರು.

**ವಿಜಯೋತ್ಸವ:**

ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ ಶ್ರೀಮತಿ ಬಸಮ್ಮ ಮಾದರ ಇವರ ಹೆಸರು ಘೋಷಣೆ ಯಾಗುತ್ತಿದ್ದಂತೆಯೇ ಅವರ ಅಪಾರ ಬೆಂಬಲಿಗರು ಸೇರಿ ವಿಜಯೋತ್ಸವ ಆಚರಿಸಿದರು. ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯ ಶಂಕರಗೌಡ ಲಿಂಗದಳ್ಳಿ ಮಾತನಾಡಿ ಗ್ರಾಪಂ ಹಿತದೃಷ್ಟಿಯಿಂದ ಎಲ್ಲರೂ ಒಂದಾಗಿ ಅಧ್ಯಕ್ಷರ ಆಯ್ಕೆ ಮಾಡಿದ್ದೇವೆ.

ಪಂಚಾಯತಿ ವ್ಯಾಪ್ತಿಗೆ ಬರುವ ಎಲ್ಲ ಗ್ರಾಮಗಳಿಗೂ ಮೂಲಸೌಕರ್ಯಗಳನ್ನು ಕಲ್ಪಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದರು. ಈ ವೇಳೆ ಗ್ರಾಪಂ ಉಪಾಧ್ಯಕ್ಷ ಸಾಹೇಬಲಾಲ ಟಕ್ಕಳಕಿ, ಮುಖಂಡರಾದ ಶಂಕರಾಯ ಬಿರಾದಾರ, ಸಂಗನಗೌಡ ಢವಳಗಿ, ಬಸಪ್ಪ ಮಾದರ, ಶಾಂತಗೌಡ ಜಾಲಿಕಟ್ಟಿ, ಎಲ್ಲಪ್ಪ ಮಾದರ, ಶಂಕರಗೌಡ ವಜ್ಜಲ್, ಶಿವನಗೌಡ ಕೋನಾಳ, ಶರಣಯ್ಯ ಹಿರೇಮಠ, ಸೋಮನಾಥ ಮಾದರ, ಗ್ರಾಪಂ ಸದಸ್ಯರಾದ ರೇಣುಕಾ ಟಿ.ಮಾದರ, ತಪಸ್ಸುಮ್ ಎಲ್. ವಾಲಿಕಾರ, ಯಂಕಮ್ಮ ಹ. ಅಂಗಡಗೇರಿ, ಮಹಾದೇವಿ ಹಡಪದ, ಶಂಕರಗೌಡ ಲಿಂಗದಳ್ಳಿ, ಸೋಮನಗೌಡ ಹಡಲ್ಗೇರಿ, ನಾಗಮ್ಮ ಹತ್ತೂರ, ಶಿವಾನಂದ್ ತಾಳಿಕೋಟಿ, ಅಶೋಕ್ ನಾಯ್ಕೋಡಿ, ಭಾಗ್ಯಶ್ರೀ ಯಾಳವಾರ, ಬಸಪ್ಪ ಎಂ.ನಾಯ್ಕೋಡಿ ಇದ್ದರು.

# ದಯಾನಂದ ಹೀರಣಾಯಿಕ ಗೆ ಪಿ.ಎಚ್.ಡಿ. ಪದವಿ

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ:– ಹುಲಸೂರ : ಸಮೀಪ ಇರುವ ಕೊಂಗಳಿ ಗ್ರಾಮದ ಉಪನ್ಯಾಸಕ ದಯಾನಂದ ಬಳವಂತರಾವ ಹೀರಣಾಯಿಕ ಅವರಿಗೆ ಇಂದೋರ ಎ.ಪಿ. ಜೆ. ಅಬ್ದುಲ್ ಕಲಾಂ ವಿಶ್ವವಿದ್ಯಾಲಯ ಪಿ.ಎಚ್.ಡಿ. ಪದವಿ ನೀಡಿದೆ.

ಡಾ. ಸೀಮಾ ಅಗರವಾಲ ಮಾರ್ಗದರ್ಶನದಲ್ಲಿ 'ಸಿಂಥೆಸಿಸ ಆಫ್ ಸಮ್ ಟರ್ನರಿ ಲೆಂಥನೈಡ ಕಾಂಪ್ಲೆಕ್ಸಸ ವಿಥ್ ಪಿಕೊಲಿನಿಕ್



ಆಸಿಡ್ ಆಂಡ್ ಸ್ಟಡಿ ಆಫ್ ದೇರ ಬಯಾಲಜಿಕಲ ಆಕ್ಟಿವಿಟಿ ಕುರಿತು ರಸಾಯನಿಕ ಶಾಸ್ತ್ರದಲ್ಲಿ ಅವರು ಮಂಡಿಸಿದ ಪ್ರಬಂಧವನ್ನು ವಿಶ್ವವಿದ್ಯಾಲಯ ಪಿ.ಎಚ್.ಡಿ. ಪದವಿಗೆ ಮಾನ್ಯ ಮಾಡಿದೆ.

ದಯಾನಂದ ಬಳವಂತರಾವ ಹೀರಣಾಯಿಕ ಅವರಿಗೆ ಪಿ.ಎಚ್.ಡಿ. ಪದವಿ ಲಭಿಸಿದ್ದಕ್ಕೆ ಕಿಸಾನ ಶಿಕ್ಷಣ ಪ್ರಸಾರಕ ಸಂಸ್ಥೆಯ ಅಧ್ಯಕ್ಷ ಅನಿಲ ಶಿಂಧೆ, ಶಿವಾಜಿ ಕಾಲೇಜ್ ಪ್ರಾಚಾರ್ಯ ನೀಲಕಂಠ ಕಾಳೆ, ವರದಿಗಾರರಾದ ಗುರುಪ್ರಸಾದ ಮೆಂಟೇಸೇರಿ ಕೊಂಗಳಿ ಗ್ರಾಮಸ್ಥರೂ ಸಂತಸ ವ್ಯಕ್ತಪಡಿಸಿದ್ದಾರೆ.

# ಕಂಪ್ಲಿ: ವಿದ್ಯುತ್ ಸಂಬಂಧಿತ ದೂರುಗಳಿದ್ದಲ್ಲಿ ಸಂಪರ್ಕಿಸಿ

ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಮಾ.07–ಕಂಪ್ಲಿ ಪುರಸಭೆ ವ್ಯಾಪ್ತಿಯ ವಿದ್ಯುತ್ ಗ್ರಾಹಕರು ಮತ್ತು ಸಾರ್ವಜನಿಕರು ಜೆಸ್ಕಾಂನ ವಿದ್ಯುತ್ ಸಂಬಂಧಿತ ದೂರುಗಳಿದ್ದಲ್ಲಿ ಸಹಾಯವಾಣಿ ಸಂಖ್ಯೆ 9480845104 ಗೆ ಸಂಪರ್ಕಿಸಬಹುದು. ಈ ಸಹಾಯವಾಣಿ ಸಂಖ್ಯೆಯು ಕೇವಲ ಕಂಪ್ಲಿ ನಗರ ವ್ಯಾಪ್ತಿಯ ದೂರುಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದು ಕಂಪ್ಲಿ ಜೆಸ್ಕಾಂನ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅವರು ತಿಳಿಸಿದ್ದಾರೆ.

ಕಂಪ್ಲಿ ಗ್ರಾಮೀಣ ಶಾಖೆ:

ಮಹಾಂತೇಶ್(ಜೆಇ)–9448397533: ಸಣಾಪುರ ಗ್ರಾಪಂ ವ್ಯಾಪ್ತಿಯ ಲೀಲಾವತಿ ಕ್ಯಾಂಪ್, ಬುಜ್ಜಮ್ಮ ಕ್ಯಾಂಪ್, ನಂ.2–ಮುದ್ದಾಪುರ, ಕೊಂಡಯ್ಯ ಕ್ಯಾಂಪ್ ಗ್ರಾಮಗಳಿಗೆ ತ್ರಿಮೂರ್ತಿ–9901340196.

ಸಣಾಪುರ, ರಾಮದೇವರ ಕ್ಯಾಂಪ್, ಬಸವೇಶ್ವರ ಕ್ಯಾಂಪ್, ಅರಳಹಳ್ಳಿ(ಮಟ್ಟಿ), ಮಾರೆಮ್ಮ ಕ್ಯಾಂಪ್ ಗ್ರಾಮಗಳಿಗೆ ಕುಮಾರಗೌಡ–9743852118. ಮಣ್ಣೂರು ಕ್ಯಾಂಪ್, ನಂ 1 ಇಟಗಿ ಗ್ರಾಮಗಳಿಗೆ ನಾಗರಾಜ–9731289464.

ಹಂಪಾದೇವನಹಳ್ಳಿ ಗ್ರಾಪಂ ವ್ಯಾಪ್ತಿಯ ಜಾನೂರು, ಚಿಕ್ಕಜಾಯಿಗನೂರು, ಹಂಪಾದೇವನಹಳ್ಳಿ–ನಿಂಗಪ್ಪ(9901873538). ಗೋನಾಳು, ಜೀರಿಗನೂರು, ಕುಂಬಾರ ಕ್ಯಾಂಪ್–ಶಿವಕುಮಾರ(9663561112). ಜೌಕು–ಶಿವರಾಜ(8073452890).

ದೇವಸಮುದ್ರ ಗ್ರಾಪಂ ವ್ಯಾಪ್ತಿಯ ದೇವಸಮುದ್ರ–ಶಾಂತ ಕುಮರ(9148257670). ಕೃಷ್ಣನಗರ ಕ್ಯಾಂಪ್–ಭರತ್(8105429255).

ಕಂಪ್ಲಿ ಶಾಖೆ:

ವಿನೋದ ಕುಮಾರ್ (ಎಇ)–9480844965.

ರಾಮಸಾಗರ ಗ್ರಾಪಂ ವ್ಯಾಪ್ತಿಯ ರಾಮಸಾಗರ–ಮಲ್ಲಯ್ಯ(6361171496), ಹರಿಪ್ರಸಾದ್(9535267881), ತಿಮ್ಮಪ್ಪ(8970261726). ನಂ.10–ಮುದ್ದಾಪುರ ಗ್ರಾಪಂ ವ್ಯಾಪ್ತಿಯ ನಂ.10 ಮುದ್ದಾಪುರ–ಉಮೇಶ(9480845105), ಮಲ್ಲಿಕಾರ್ಜುನ(8150039213). ಕಣಿವೆ ತಿಮ್ಮಲಾಪುರ–ವೀರಣ್ಣ(940845159). ಬೆಳಗೋಡುಹಾಳು–ವೆಂಕಟೇಶ (8088326535).

ಮೆಟ್ರಿ ಶಾಖೆ:

ಮೊಹಮ್ಮದ್ ಸಮಿವುಲ್ಲಾ (ಜೆಇ)–9480844996.

ಮೆಟ್ರಿ ಗ್ರಾಪಂ ವ್ಯಾಪ್ತಿಯ ಮೆಟ್ರಿ–ಶೇಕ್ಷಾವಲಿ(9480845124), ಚಿನ್ನಾಪುರ–ದ್ಯಾವಣ್ಣ(9742251964), ಉಪ್ಪಾರಹಳ್ಳಿ–ರವಿಕುಮಾರ(9008391215).

ದೇವಲಾಪುರ ಗ್ರಾಪಂ ವ್ಯಾಪ್ತಿಯ ದೇವಲಾಪುರ–ರೆಹಮತವುಲ್ಲಾ(9480845122), ಸೋಮಲಾಪುರ–ಹೊನ್ನೂರ ಸ್ವಾಮಿ(9113916252).

ಸುಗ್ಗೇನಹಳ್ಳಿ ಗ್ರಾಪಂ ವ್ಯಾಪ್ತಿಯ ಸುಗ್ಗೇನಹಳ್ಳಿ–ಗೋಪಾಲ(9482260671), ಮಾವಿನಹಳ್ಳಿ–ಗುರುಪ್ರಸಾದ(7337859377), ಹೊನ್ನಳ್ಳಿ, ಶ್ರೀರಾಮರಂಗಾಪುರ–ನಂದೀಶ(9036506401, 9036506401).

ಜೆಸ್ಕಾಂನ ಪಾಳಿಯ ಸಿಬ್ಬಂದಿಯವರು ಗ್ರಾಹಕರ ದೂರುಗಳಿಗೆ ತ್ವರಿತವಾಗಿ ಸ್ಪಂದಿಸಲಾಗುವುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾ.10 ನರ್ಸಿಂಗ್ ಕಾಲೇಜಿನಲ್ಲಿ ಪದವಿ ಪ್ರದಾನ ಸಮಾರಂಭ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.7– ನಗರದ ಬಿ.ವಿ.ವಿ.ಸಂಘದ ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯ ಮತ್ತು ಬಿ.ವಿ.ವಿ.ಎಸ್. ನರ್ಸಿಂಗ್ ವಿಜ್ಞಾನ ಮಹಾವಿದ್ಯಾಲಯಗಳ ಪ್ರಥಮ ಪದವಿ ಪ್ರದಾನ ಸಮಾರಂಭ ಮಾರ್ಚ 10 ರಂದು ನಡೆಯಲಿದೆ. ಮೆಡಿಕಲ್ ಕಾಲೇಜಿನ ಆವರಣದಲ್ಲಿರುವ ಶತಾಬ್ಧಿ ಭವನದಲ್ಲಿ ಸೋಮವಾರ ಮುಂಜಾನೆ 10 ಗಂಟೆಗೆ ಆಯೋಜಿಸಿರುವ ಪದವಿ ಪ್ರದಾನ ಕಾರ್ಯಕ್ರಮವನ್ನು ತುಮಕೂರಿನ ಸಿದ್ಧಾರ್ಥ ಅಕಾಡೆಮಿ ಆಫ್ ಹೈಯರ್ ಎಜ್ಯುಕೇಶನ್ ಉಪಕುಲಪತಿ ಡಾ.ಕೆ.ಬಿ.ಲಿಂಗೇಗೌಡ ಉದ್ಘಾಟಿಸಲಿದ್ದು, ಅಧ್ಯಕ್ಷತೆಯನ್ನು ಬಿ.ವಿ.ವಿ.ಸಂಘದ ಕಾರ್ಯಾಧ್ಯಕ್ಷ ಡಾ.ವೀರಣ್ಣ ಚರಂತಿಮಠ ವಹಿಸಲಿದ್ದಾರೆ.

ಸಜ್ಜಲಶ್ರೀ ನರ್ಸಿಂಗ್ ವಿಜ್ಞಾನ ಕಾಲೇಜು ಹಾಗೂ ಬಿ.ವಿ.ವಿ.ಎಸ್.ನರ್ಸಿಂಗ್ ವಿಜ್ಞಾನ ಕಾಲೇಜುಗಳ ಇಬ್ಬರು ಪಿ.ಹೆಚ್.ಡಿ. ವಿದ್ಯಾರ್ಥಿಗಳು, 27 ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, 137 ಬೇಸಿಕ್ ಬಿ.ಎಸ್.ಸಿ. ನರ್ಸಿಂಗ್ ವಿದ್ಯಾರ್ಥಿಗಳು, 92 ಪೋಸ್ಟ್ ಬೇಸಿಕ್ ಬಿ.ಎಸ್.ಸಿ. ನರ್ಸಿಂಗ್ ವಿದ್ಯಾರ್ಥಿಗಳು ಸೇರಿ ಒಟ್ಟು 258 ವಿದ್ಯಾರ್ಥಿಗಳು ಪದವಿ ಸ್ವೀಕರಿಸಲಿದ್ದಾರೆ.

ಬೆಂಗಳೂರಿನ ರಾಜೀವ ಗಾಂಧೀ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ 2024ರಲ್ಲಿ ನಡೆಸಿದ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ (ಮೂರು ಚಿನ್ನದ ಪದಕ ಪಡೆದ ವಿದ್ಯಾರ್ಥಿಗಳು ಸೇರಿ) ಪದವಿ ಪ್ರದಾನ ನಡೆಯಲಿದೆ ಎಂದು ಮಹಾವಿದ್ಯಾಲಯಗಳ ಪ್ರಾಚಾರ್ಯರಾದ ಡಾ.ದಿಲೀಪ ಎಸ್.ನಾಟೇಕರ್ ಮತ್ತು ಜಯಶ್ರೀ ಇಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಮಾ.12 ಲೋಕಾಯುಕ್ತ ಜನಸಂಪರ್ಕ ಸಭೆ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.7– ಬಾಗಲಕೋಟೆ ಲೋಕಾಯುಕ್ತ ಪೊಲೀಸ್ ಅಧಿಕಾರಿಗಳು ಮಾರ್ಚ 12 ರಂದು ಬೆಳಿಗ್ಗೆ 10.30 ರಿಂದ ಮಧ್ಯಾಹ್ನ 1.30 ವರೆಗೆ ಮುಧೋಳ ತಾಲೂಕಾ ಪಂಚಾಯತ ಕಾರ್ಯಾಲಯದಲ್ಲಿ ಜನಸಂಪರ್ಕ ಸಭೆ ಹಮ್ಮಿಕೊಂಡಿದ್ದಾರೆ.

ಸಾರ್ವಜನಿಕರಿಗೆ ಸರಕಾರಿ ಕಚೇರಿಗಳಲ್ಲಿ ಅಧಿಕೃತ ಕೆಲಸಗಳನ್ನು ಮಾಡಿಕೊಡುವಲ್ಲಿ ವಿನಾಕರಣ ವಿಳಂಬ ಹಾಗೂ ಇನ್ನಿತರೆ ತೊಂದರೆ ಆಗಿದ್ದರೆ ಅಂತಹ ಅಧಿಕಾರಿ ಮತ್ತು ನೌಕರರ ವಿರುದ್ಧ ಸಾರ್ವಜನಿಕರು ಸಭೆಗೆ ಹಾಜರಾಗಿ ತಮ್ಮ ಲಿಖಿತ ದೂರುಗಳನ್ನು ನಿಗದಿತ ಪ್ರಪತ್ರದಲ್ಲಿ ನೀಡಬಹುದಾಗಿದೆ. ಸ್ಥಳದಲ್ಲಿ ಪರಿಹರಿಸಿಕೊಳ್ಳಬಹುದಾದ ದೂರುಗಳನ್ನು ಸ್ಥಳೀಯ ಅಧಿಕಾರಿಗಳ ಸಹಕಾರದೊಂದಿಗೆ ಇತ್ಯರ್ಥಪಡಿಸಲು ಪ್ರಯತ್ನಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ 08354–236200, 295170ಗೆ ಸಂಪರ್ಕಿಸುವಂತೆ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಮಲ್ಲೇಶ ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜಿ.ಪಂ. ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗೆ ಸಿದ್ಧರಾಗೋಣ: ತೆಲ್ಕೂರ




ಮಲ್ಲಮ್ಮ ನುಡಿ ವಾರ್ತೆ

ಸೇಡಂ:ಮಾ.07–ತಾಲೂಕಿನ ಭಾರತೀಯ ಜನತಾ ಪಾರ್ಟಿ ಸೇಡಂ ಮಂಡಲ ವತಿಯಿಂದ ಹಮ್ಮಿಕೊಂಡಿದ್ದ ನೂತನ ಜಿಲ್ಲಾಧ್ಯಕ್ಷರಿಗೆ ಸನ್ಮಾನ ಸಮಾರಂಭ ಹಾಗೂ ಮಂಡಲ ಅಧ್ಯಕ್ಷರ ಪದಗ್ರಹಣ ಕಾಯ9ಕ್ರಮದಲ್ಲಿ ಮಾನ್ಯ ರಾಜಕುಮಾರ ಪಾಟೀಲ್ ತೆಲ್ಕೂರ ಅವರು ಭಾಗವಹಿಸಿ ಕಲಬುರಗಿ ಗ್ರಾಮಾಂತರ ನೂತನ ಜಿಲ್ಲಾಧ್ಯಕ್ಷರಾದ ಅಶೋಕ ಬಗಲಿ ಹಾಗೂ ಮಂಡಲ ಅಧ್ಯಕ್ಷರಾದ ಶರಣು ಶಂಕರ ಮೇಡಿಕಲ ಅವರಿಗೆ ಸತ್ಕರಿಸಿ ಶುಭ ಹಾರೈಸಿದರು ನಂತರ ಕಾಯ9ಕ್ರಮವನ್ನುದ್ದೇಶಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಮುಖಂಡರಾದ ಕಲ್ಯಾಣಪ್ಪ ಪಾಟೀಲ್ ಮಳಖೇಡ, ವೀರಾರೆಡ್ಡಿ ಜೆಇ ಬಟಗೇರ, ವೆಂಕಟರೆಡ್ಡಿ ಪಾಟೀಲ ಮಾದವಾರ, ನಾಗರೆಡ್ಡಿ ದೇಶಮುಖ್ ಮದನಾ, ಬನ್ನಪ್ಪ ಕುಂಬಾರ, ನಾಗಪ್ಪ ಕೊಳ್ಳಿ, ಸಿದ್ದು ಬಾನರ್ ಕೋಡ್ಲಾ, ವಿರೇಂದ್ರ ಪಾಟೀಲ್ ರಾಯಕೋಡ

ಪ್ರಧಾನ ಕಾರ್ಯದರ್ಶಿಗಳಾದ ತಿರುಪತಿ ಶಹಬಾದಕರ್, ವಿರೇಶ ಹೂಗಾರ ಸೇರಿದಂತೆ ಮುಖಂಡರು ಯುವಕರು ಕಾರ್ಯಕರ್ತರು ಇನ್ನಿತರರು ಇದ್ದರು.

# ಪ್ರತಿ ವ್ಯಕ್ತಿಗೂ ಕಾನೂನಿನ ತಿಳುವಳಿಕೆ ಇರಬೇಕು–ನ್ಯಾ.ಚಂದ್ರಶೇಖರ

ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಮಾ.7– ಪ್ರತಿಯೊಬ್ಬರೂ ಕಾನೂನಿನ ಅರಿವು, ತಿಳುವಳಿಕೆ ಹೊಂದಿದರೆ ಸುಸಂಸ್ಕೃತ ಸಮಾಜದ ಕನಸು ಸಾಕಾರಗೊಳ್ಳುತ್ತದೆ ಎಂದು ಬಾಗಲಕೋಟೆಯ ಹಿರಿಯ ದಿವಾನಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಚಂದ್ರಶೇಖರ ದಿಡ್ಡಿ ಹೇಳಿದ್ದಾರೆ. ಸಮೀಪದ ಬೇವೂರಿನ ಆದರ್ಶ ಸಂಯುಕ್ತ ಪದವಿ ಪೂರ್ವ ಮಹಾವಿದ್ಯಾಲಯದಲ್ಲಿ ಗುರುವಾರ ನಡೆದ ಕಾನೂನು ಅರಿವು ಮತ್ತು ನೆರವು ಕಾರ್ಯಕ್ರಮವನ್ನು ಸಸಿಗೆ ನೀರುಣಿಸುವ ಮೂಲಕ ಉದ್ಘಾಟನೆ ಮಾಡಿ ಅವರು ಮಾತನಾಡಿದರು. ನಿತ್ಯ ನಡೆಯುವ ಅಪರಾಧಗಳು, ಅದಕ್ಕೆ ಸಂಬಂಧಿಸಿದ ಕಾನೂನು, ಜನನ–ಮರಣ ನೋಂದಣಿ, ಮಕ್ಕಳ ಹಕ್ಕು ಮತ್ತು ಕಾಯ್ದೆ, ಬಾಲ್ಯವಿವಾಹದಿಂದಾಗುವ ಸಮಸ್ಯೆಗಳ ಕುರಿತು ತಿಳಿಸಿದ ನ್ಯಾಯಾಧೀಶರು, ವಿದ್ಯಾರ್ಥಿಗಳು ಇವುಗಳ ಬಗ್ಗೆ ಅರಿವು ಮೂಡಿಸಿಕೊಳ್ಳಬೇಕು ಎಂದು ಹೇಳಿದರು.

ಮುಖ್ಯ ಅತಿಥಿ ಶಿಕ್ಷಣ ಸಂಯೋಜಕ ಎಸ್.ಎಸ್.ಬೆಣ್ಣೂರ, ಕಾನೂನುಗಳ ಬಗ್ಗೆ ತಿಳುವಳಿಕೆ ಮೂಡಲು ಪ್ರತಿ ವ್ಯಕ್ತಿ ಶಿಕ್ಷಣವಂತರಾಗಬೇಕು. ಕಾನೂನಿನ ಅರಿವು, ತಿಳುವಳಿಕೆಯಿಂದಾಗಿ ಸಮಾಜದಲ್ಲಿ ಶಾಂತಿ ಸಹಬಾಳ್ವೆಯಿಂದ ಬದುಕಲು ಸಾಧ್ಯ ಎಂದು ಹೇಳಿದರು. ಮುಖ್ಯಗುರು ಯೋಗೇಶ ಲಮಾಣಿ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕ ಪ್ರಕಾಶ ತಳವಾರ, ವಿಷ್ಣು ಸನ್ನಿ, ಕೆ.ಎಸ್. ಚೌಧರಿ, ಡಿ.ಪಿ.ಮಾದರ, ಜಿ.ಕೆ. ಚಿಲ್ಲಾಪೂರ ಇದ್ದರು.

# ಸಿಂಧನಮಡು ಗ್ರಾಮದಲ್ಲಿ ಮೂಲಭೂತ ಸೌಕರ್ಯದ ಕೊರತೆ



ಮಲ್ಲಮ್ಮ ನುಡಿ ವಾರ್ತೆ

ಸೇಡಂ : ಮಾ. 07. ತಾಲೂಕಿನ ಸಿಂಧನಮಡು ಗ್ರಾಮದಲ್ಲಿ ಮೂಲಭೂತ ಸೌಕರ್ಯದ ಕೊರತೆ ಗ್ರಾಮದ ಈಶ್ವರದೇವಸ್ಥಾನ ದಿಂದ ಗ್ರಾಮದ ಅಗಸಿಯ ( ಮಹಾದ್ವಾರದ ) ಮುಂದೆ ಒಳಚರಂಡಿಯು ಕಸದಿಂದ ತುಂಬಿದ್ದು ನೀರು ರಸ್ತೆಯ ಮೇಲೆ ಮಡುಗಟ್ಟಿ ನಿಂತ್ತಿದ್ದು ಸುಮಾರು ದಿನಗಳಿಂದ ಒಳಚರಂಡಿ ಯನ್ನು ಸ್ವಚ್ಛ ಮಾಡದಿರುವುದು ಇದಕ್ಕೆ ಕಾರಣ ಪ್ರಸ್ತುತವಾಗಿ ನಿಂತ ನಿರಿನಿಂದ ಸಾಂಕ್ರಾಮಿಕ ರೋಗಗಳಿಗೆ ದಾರಿ ಮಾಡಿ ಕೊಡುತ್ತಿದೆ. ಚಿಕ್ಕ್ ಚಿಕ್ಕ್ ಮಕ್ಕಳ್ಳು ಹಿರಿಯರು ರಸ್ತೆಯ ಮೇಲೆ ಅಲೆದಾಡಲು ಬಹಳಷ್ಟು ಕಷ್ಟ ವಾಗಿದೆ ಅದೇ ರೀತಿ ಗ್ರಾಮದ ವಿವಿಧ ಓಣಿಗಳಲ್ಲಿಯೂ ಇದೆ ಪರಸ್ಥಿತಿ ಇದೆ ಮನೆಗಳು ಮುಂದೆ ಕಟ್ಟಿಗಳ ಮೇಲೆ ಕುಡಲು ಆಗುತ್ತಿಲ್ಲ ಕೆಟ್ಟದಾಗಿ ವಾಸನೆ ಬರುತ್ತಿದೆ.

ಗ್ರಾಮದಲ್ಲಿ ಸುಮಾರು 4 ವರ್ಷಗಳಿಂದ ಸಾರ್ವಜನಿಕ ನೀರು ಶುದ್ದಿಕರಣ ಮಾಡುವ ಯಂತ್ರವು ಕಾರ್ಯನಿರ್ವಹಿಸುತ್ತಿಲ್ಲ ಈಗಂತೂ ಬಿಸಿಲಿನ ಪ್ರಮಾಣ ಅತೀ ಹೆಚ್ಚಾಗಿದ್ದು ಗ್ರಾಮಕ್ಕೆ ಓಪನ್ ವೆಲ್ ದಿಂದ ಸಂಪೂರ್ಣವಾಗಿ ನೀರು ಸರಬರಾಜು ಆಗುತ್ತದೆ.

ಈ ನೀರು ಕುಡಿಯಲು ಯೋಗ್ಯವಲ್ಲದು ಇದರಲ್ಲಿ ಗಿಡದ ಎಲೆಗಳು ಪಕ್ಷಿಗಳ ರೆಕ್ಕೆಗಳು ಮಣ್ಣು ಮಿಶ್ರಿತ ವಾಗಿ ನೀರು ಬರುತ್ತದೆ. ಆದರಿಂದ ಗ್ರಾಮಸ್ಥರು ನೆರೆಯ ಭೂತಪುರ. ರಂಜೋಳ. ಕೊಡ್ಲಾ. ಸೇಡಂ ದಿಂದ ಫಿಲ್ಟರ್ ನೀರು ತರುವುದು ಅನಿವಾರ್ಯವಾಗಿದೆ.

ಸಂಬಂಧ ಪಟ್ಟ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮಗಳ ಮೂಲಭೂತ ಸೌಕರ್ಯಗಳ ಬಗ್ಗೆ ತಿಳಿದು ಕೊಳ್ಳುವುದು ಅವರ ಆದ್ಯ ಕರ್ತವ್ಯವಾಗಿದೆ. ಆದರಿಂದ ಸಂಬಂಧ

ಪಟ್ಟ ಅಧಿಕಾರಿಗಳು ಇತ್ತ ಕಡೆ ಗಮನಹರಿಸಿ ಸಿಂಧನಮಡು ಗ್ರಾಮದ ಸಮಸ್ಸೆಗಳನ್ನು ಪರಿಹರಿಸಬೇಕೆಂದು ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷ ರವೀಂದ್ರ ಪೊಲೀಸ್ ಪಾಟೀಲ್. ಮತ್ತು ಮಾಜಿ ಗ್ರಾಮ ಪಂಚಾಯತ್ ಸದಸ್ಯ ನರಸಿಂಹಲು ಭೋವಿ ಸಿಂಧನಮಡು ರವರು ಆಗ್ರಹಿಸಿದ್ದಾರೆ.

# ಜೋಡು ಸಾವಿಗೆ ನ್ಯಾಯ ಸಿಗುವುದು ಯಾವಾಗ, ರಂಗಸ್ವಾಮಿ



ಮಲ್ಲಮ್ಮ ನುಡಿ ವಾರ್ತೆ

ಗುರುಮಠಕಲ್:ಮಾ, 07. ತಾಲೂಕಿನ ನೀಲಹಳ್ಳಿ ಗ್ರಾಮದ ಕೆರೆಯಲ್ಲಿ ಇತ್ತೀಚೆಗೆ ಅಸಹಜವಾಗಿ ಇಬ್ಬರು ಯುವತಿಯರ ಶವಗಳು ದೊರಕಿದ್ದು ಕೂಡಲೇ ಸಮಗ್ರ ತನಿಖೆ ಕೈಗೊಂಡು ತಪ್ಪಿತಸ್ಥರ ವಿರುದ್ಧ ಆದಷ್ಟು ಬೇಗನೆ ಕ್ರಮ ಜರುಗಿಸಬೇಕು ಪಟ್ಟಣದ ಇಂದಿರಾನಗರದ ಅಲೆಮಾರಿ ಬುಡಗ ಜಂಗಮ ಸಮುದಾಯದ ಶ್ಯಾಮಮ್ಮ ಹುಸೇನಪ್ಪ ಸಿರಿಗಿರಿ (20), ಸಾಯಮ್ಮ ಭೀಮಪ್ಪ ಸಿರಿಗಿರಿ (15) ಇರ್ವರ ಶವವು ಕಳೆದ ಫೆ. 12ರಂದು ಪತ್ತೆಯಾಗಿದ್ದು, ಪ್ರಕರಣ ದಾಖಲಾಗಿದ್ದರೂ ಇದುವರೆಗೂ ಕ್ರಮ ಜರುಗಿಸಿಲ್ಲ. ಕೂಡಲೇ ನ್ಯಾಯ ದೊರಕಿಸಿಕೊಡುವಂತೆ ರಂಗಸ್ವಾಮಿ ದಾಸರಿ ಡಿ. ಎಸ್. ಎಸ್. ಕೊಂಕಲ್ ತಾಲೂಕು ಅಧ್ಯಕ್ಷರು ಆಗ್ರಹಿಸಿದ್ದಾರೆ.

# ಮಹಿಳಾ ದಿನಾಚರಣೆ ಯೋಗ ಶಿಬಿರ ಇಂದು

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ನಗರದ ಕಂಬಳಿಮಠ ದಲ್ಲಿ ದಿನಾಂಕ 8. ರಿಂದ 13 ವರೆಗೆ ನಡೆಯಲಿರುವ ಪ್ರತಿದಿನ ಬೆಳಗ್ಗೆ 6 ರಿಂದ 7 ರವರೆಗೆ ಮಹಿಳಾ ದಿನಾಚರಣೆ–ಯ ಕಾರ್ಯಕ್ರಮವನ್ನು ಯೋಗ ಶಿಬಿರದ ಪ್ರಮುಖರಾದ ಆನಂದ ಮೋಳಕೆರಾ ಉದ್ಘಾಟಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ರೊಟರಿಯನ್ ಸಿದಾಣಟಿಜಜಜಿುಟಿಜಜವು ಯಾನಗುಂದೆ. ಅತಿಥಿಗಳಾಗಿ ಡಾ. ಅರ್ಚನಾ ಮಂಡಿ. ಡಾ. ಸಂಗೀತಾ ಮಂಠಾಳೆ. ಕರಾಟೆ ಕೊಚ್ ನಡೆಸುವ ಸಂತೋಷ ವಾಲಿ. ರೋಟರಿ ಕ್ಲಬ್ ಅಧ್ಯಕ್ಷ ಡಾ. ಆನಂದ ಪಾಟೀಲ್. ಕಾರ್ಯದರ್ಶಿ ನಾಗನಾಥ ಮುಕ್ತಾ. ಖಜಾಂಚಿ ಪರಮೇಶ್ವರ್ ಬಿರಾದಾರ ಸೇರಿದಂತೆ ಇನ್ನಿತರರು ಭಾಗವಹಿಸುವರು ಮಹಿಳೆಯರಿಗೆ ಮಾತ್ರ ರೋಟರಿ ಕ್ಲಬ್ ವತಿಯಿಂದ ಯೋಗ ಶಿಬಿರ ಹಮ್ಮಿಕೊಳ್ಳಲಾಗಿದೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ರೋಟರಿ ಕ್ಲಬ್ ವತಿಯಿಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ



**ಶ್ರೀ ಡಿ ಕೆ ಶಿವಕುಮಾರ್,** ಮಾನ್ಯ ಉಪ ಮುಖ್ಯ ಮಂತ್ರಿಗಳು , **ಶ್ರೀ ಮಲ್ಲಿಕಾರ್ಜುನ ಖರ್ಗೆ,** ರಾಜ್ಯ ಸಭೆಯ ವಿರೋಧ ಪಕ್ಷ ನಾಯಕರು ಮತ್ತು **ಶ್ರೀ ಸಿದ್ದರಾಮಯ್ಯ,** ಸನ್ಮಾನ್ಯ ಮುಖ್ಯ ಮಂತ್ರಿಗಳು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ ಕ್ಷಣ.

## ಕೆ.ಕೆ.ಆರ್.ಡಿ.ಬಿ. ಪ್ರಮುಖ ಯೋಜನೆಗಳು

- ಅಕ್ಷರ ಆವಿಷ್ಕಾರ
- ಆರೋಗ್ಯ ಆವಿಷ್ಕಾರ
- ಉದ್ಯೋಗ ಆವಿಷ್ಕಾರ
- ಹಿಂದುಳಿದ ವರ್ಗಗಳ ಅಭಿವೃದ್ಧಿ
- ಅಲ್ಪಸಂಖ್ಯಾತರ ಅಭಿವೃದ್ಧಿ
- ಪ.ಜಾತಿ-ಪ.ಪಂ ಅಭಿವೃದ್ಧಿ
- ಪ್ರಜಾ ಸೌಧ ನಿರ್ಮಾಣ
- ಆಂಬುಲೆನ್ಸ್ ಸೇವೆ

**ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ, ಕಲಬುರಗಿ**

ಮತ್ತು

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

ಸಹಯೋಗದೊಂದಿಗೆ

# ಕಲ್ಯಾಣ ಪಥ ಯೋಜನೆಯ ಪ್ರಾರಂಭೋತ್ಸವ

**ಶನಿವಾರ, ದಿನಾಂಕ : 08.03.2025, ಬೆಳಿಗ್ಗೆ 11.30 ಗಂಟೆಗೆ**

**ಸ್ಥಳ : ತಾಯಿ ಮತ್ತು ಮಕ್ಕಳ ಸರ್ಕಾರಿ ಆಸ್ಪತ್ರೆ ಹತ್ತಿರ ಕಟ್ಟಿ ಸಂಗಾವಿ, ಜೇವರ್ಗಿ,**

**ಜೇವರ್ಗಿ ತಾಲೂಕು, ಕಲಬುರಗಿ ಜಿಲ್ಲೆ**




ಬಳ್ಳಾರಿ 160 ಕಿ.ಮೀ.

ಬೀದರ್ 132 ಕಿ.ಮೀ.

ಕಲಬುರಗಿ 266 ಕಿ.ಮೀ.

ಕೊಪ್ಪಳ 143 ಕಿ.ಮೀ.

ರಾಯಚೂರು 186 ಕಿ.ಮೀ.

ವಿಜಯನಗರ 146 ಕಿ.ಮೀ.

ಯಾದಗಿರಿ 133 ಕಿ.ಮೀ.

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಹಯೋಗದೊಂದಿಗೆ

**1,000**

**ಕೋಟಿ ರೂ. ವೆಚ್ಚದ**

**1,166**

**ಕಿ.ಮೀ. ರಸ್ತೆ**

## ಕಲ್ಯಾಣ ಕರ್ನಾಟಕದ ನಡೆ, ಅಭಿವೃದ್ಧಿ ಕಡೆ



ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಐ.ಟಿ-ಬಿ.ಟಿ ಇಲಾಖೆ ಸಚಿವರಾದ **ಶ್ರೀ ಪ್ರಿಯಾಂಕ್ ಖರ್ಗೆ** ಮತ್ತು ಮಾನ್ಯ ಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವರಾದ **ಶ್ರೀ ಡಿ.ಸುಧಾಕರ್** ಅವರು ಪ್ರಗತಿ ಪರಿಶೀಲನಾ ಸಭೆಯೊಂದರಲ್ಲಿ ಭಾಗವಹಿಸಿರುವುದು

**ನಮ್ಮ ಸರ್ಕಾರ :**
**ಗ್ಯಾರಂಟಿ ಸರ್ಕಾರ**

ಶಕ್ತಿ | ಗೃಹಜ್ಯೋತಿ | ಗೃಹಲಕ್ಷ್ಮಿ

ಅನ್ನಭಾಗ್ಯ | ಯುವನಿಧಿ



ಮಾನ್ಯ ಕಲ್ಯಾಣ ಕರ್ನಾಟಕದ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷರಾದ **ಡಾ. ಅಜಯ್ ಧರ್ಮ ಸಿಂಗ್** ರವರು ಪ್ರಗತಿ ಪರಿಶೀಲನಾ ಸಭೆಯಲ್ಲಿ ಪಾಲ್ಗೊಂಡಿರುವುದು.